ವಿಜಯಪುರ | ಸಂಪುಟ 04 | ಸಂಚಿಕೆ 219 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶನಿವಾರ, ಅಕ್ಟೋಬರ್ 24, 2026



"ಕಾಂಗ್ರೆಸ್‌ನ ಇತಿಹಾಸ ಬಹಳ ದೊಡ್ಡದು. ಕಾಂಗ್ರೆಸ್ ಇಲ್ಲದಿದ್ದರೆ ಈ ದೇಶ ಪ್ರಜಾಪ್ರಭುತ್ವವನ್ನು ಕಾಣುತ್ತಿರಲಿಲ್ಲ ಎಂಬುದು ಪ್ರಧಾನಿಗೂ ತಿಳಿದಿದೆ. ಇಂದು ಪ್ರಧಾನಿ ಈ ಸ್ಥಾನದಲ್ಲಿರಲು ಕೂಡ ಭಾರತದ ನಾಯಕತ್ವ ಮತ್ತು ಪ್ರಜಾಪ್ರಭುತ್ವಕ್ಕೆ ಕಾಂಗ್ರೆಸ್ ನೀಡಿರುವ ಕೊಡುಗೆ ಕಾರಣವಾಗಿದೆ.."

■ ಡಿ.ಕೆ.ಶಿವಕುಮಾರ್
ಮುಖ್ಯಮಂತ್ರಿ

## ನಾಟ್ಯ ಮಂದಿರ ಕಟ್ಟಡ ಕಾಮಗಾರಿಗೆ ಆಗ್ರಹಿಸಿ ಧರಣಿ

■ ಉದಯರಶ್ಮಿ ದಿನಪತ್ರಿಕೆ

**ಶತಮಾನದ ಇತಿಹಾಸವನ್ನು ಹೊಂದಿರುವ ವಿಜಯಪುರದ ರಾಣಿ ಚೆನ್ನಮ್ಮ ನಾಟ್ಯ ಮಂದಿರ**

ವಿಜಯಪುರ: ನಗರದ ಕೇಂದ್ರ ಬಸ್ ನಿಲ್ದಾಣದ ಮುಂದೆ ಇರುವ ಐತಿಹಾಸಿಕ ರಾಣಿ ಚೆನ್ನಮ್ಮ ನಾಟ್ಯ ಮಂದಿರವು ಶತಮಾನದ ಇತಿಹಾಸವನ್ನು ಹೊಂದಿದೆ ಇಂತಹ ಐತಿಹಾಸಿಕ ನಾಟ್ಯ ಮಂದಿರದ ಹಳೆ ಕಟ್ಟಡವನ್ನು ಜೀರ್ಣೋದ್ದಾರದ ನೆಪದಲ್ಲಿ ತೆರವುಗೊಳಿಸಿ ಕಟ್ಟಡವನ್ನು ಪ್ರಾರಂಭ ಮಾಡದೆ ಇರುವುದು ಖಂಡನೀಯ ಕೂಡಲೇ ನಾಟ್ಯ ಮಂದಿರ ಕಾಮಗಾರಿ ಪ್ರಾರಂಭ ಮಾಡಬೇಕು ಎಂದು ಸಾಮಾಜಿಕ ಹೋರಾಟಗಾರ ಸುರೇಶ ಬಿರಾದಾರ ವಿಜಯಪುರ ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಆಗ್ರಹಿಸಿದರು.

ಅವರು ವಿಜಯಪುರ ಮಹಾನಗರ ಪಾಲಿಕೆ ಆಯುಕ್ತರ ಕಚೇರಿ ಮುಂದೆ ರಾಣಿ ಚೆನ್ನಮ್ಮ ನಾಟ್ಯ ಮಂದಿರಹೋರಾಟಸಮಿತಿಯಿಂದಹಮ್ಮಿಕೊಂಡಿದ್ದ ಧರಣಿಯಲ್ಲಿ ಅವರು ಮಾತನಾಡಿದರು.

ಹೋರಾಟಗಾರರಾದ ಲಾಯಪ್ಪ ಇಂಗಳೆ ಹಾಗೂ ವಿನೋದ ಖೇಡ ಅವರು ಮಾತನಾಡಿ, ವಿಜಯಪುರ ನಗರದ ಕಿತ್ತೂರು ರಾಣಿ ಚೆನ್ನಮ್ಮ ನಾಟ್ಯ ಮಂದಿರವನ್ನು ಉಳಿಸಲು ರಾಣಿ ಚೆನ್ನಮ್ಮ ನಾಟ್ಯ ಮಂದಿರ ಹೋರಾಟ ಸಮಿತಿ ನಿರಂತರ ಹೋರಾಟ ಮಾಡುತ್ತ ಬಂದಿದೆ, ಸಮಿತಿಯ ಹೋರಾಟಕ್ಕೆ ಮಣಿದು ಹಿಂದಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಭೂಮಿ ಪೂಜೆ ಮಾಡಿದರು ಕೂಡಾ ಇಲ್ಲಿಯವರೆಗೆ ನಾಟ್ಯ ಮಂದಿರದ ಕಾಮಗಾರಿ ಪ್ರಾರಂಭ ಮಾಡದೆ ಇರುವುದು ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದ ಅವರು, ಕೂಡಲೇ ನಾಟ್ಯ ಮಂದಿರದ ಕಟ್ಟಡ ಕಾಮಗಾರಿ ಪ್ರಾರಂಭ ಮಾಡಬೇಕು ಎಂದು ಆಗ್ರಹಿಸಿದರು.

ಪಾಲಿಕೆ ಉಪ ಆಯುಕ್ತ ಮಹಾವೀರ ಬೋರಣ್ಣವರ ಹಾಗೂ ಅಧೀಕ್ಷಕ ಅಭಿಯಂತರಾದ ತಿಮ್ಮಪ್ಪ ಇ ಅವರು ಪಾಲಿಕೆ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಆದಷ್ಟು ಬೇಗನೆ ರಾಣಿ ಚೆನ್ನಮ್ಮ ನಾಟ್ಯ ಮಂದಿರ ಕಾಮಗಾರಿ ಪ್ರಾರಂಭ ಮಾಡುತ್ತೇವೆ ಎಂದು ಭರವಸೆ ನೀಡಿದ ಹಿನ್ನೆಲೆ ಧರಣಿ ಹೋರಾಟಗಾರರು ಧರಣಿ ಹಿಂಪಡೆದರು.

ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ಹಿರಿಯ ಮುಖಂಡ ರಮೇಶ ನಿಡೋಣಿ, ನ್ಯಾಯವಾದಿ ದಾನೇಶ ಅವಟಿ ಉಪಸ್ಥಿತರಿದ್ದರು.

# ಸ್ಟಿಂಗ್ ಆಪರೇಷನ್: ನಿಷ್ಪಕ್ಷಪಾತ ತನಿಖೆಗೆ ಸಿದ್ದರಾಮಯ್ಯ ಆಗ್ರಹ

## 'ಸ್ಟಿಂಗ್ ಆಪರೇಷನ್' ಕಟ್ಟುಕಥೆ, ಬ್ಲ್ಯಾಕ್‌ಮೇಲ್ ಉದ್ದೇಶ | ಸತ್ಯ ಸಾರ್ವಜನಿಕರಿಗೆ ತಿಳಿಯಲೆಂದು ದೂರು ದಾಖಲು ಎಂದ ಮಾಜಿ ಸಿಎಂ



ಬೆಂಗಳೂರು: ತಮ್ಮನ್ನು ಗುರಿಯಾಗಿಸಿಕೊಂಡು ನಡೆಸಲಾಗಿದೆ ಎನ್ನಲಾದ 'ಸ್ಟಿಂಗ್ ಆಪರೇಷನ್' (ರಹಸ್ಯ ಕಾರ್ಯಾಚರಣೆ) ಸಂಪೂರ್ಣವಾಗಿ ಕಟ್ಟುಕಥೆ ಮತ್ತು ಸುಳ್ಳು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಹೇಳಿದ್ದಾರೆ. ಇದು ತಮ್ಮನ್ನು ಬ್ಲ್ಯಾಕ್‌ಮೇಲ್ ಮಾಡುವ ಉದ್ದೇಶದಿಂದ ನಡೆಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಸತ್ಯಾಂಶವನ್ನು ಹೊರತರುವ ನಿಟ್ಟಿನಲ್ಲಿ ಮತ್ತು ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆಹಚ್ಚಲು ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಅವರು ಆಗ್ರಹಿಸಿದ್ದಾರೆ.

ಸತ್ಯ ಹೊರಬರಬೇಕು ಮತ್ತು ಈ ಕಾರ್ಯಾಚರಣೆಯ ಹಿಂದೆ ಯಾರಿದ್ದಾರೆ ಎಂಬುದು ಸಾರ್ವಜನಿಕರಿಗೆ ತಿಳಿಯಬೇಕು ಎಂಬ ಉದ್ದೇಶದಿಂದ ತಾವೇ ಸ್ವತಃ ದೂರು ದಾಖಲಿಸಿರುವುದಾಗಿ ಅವರು ತಿಳಿಸಿದ್ದಾರೆ.

"ಸತ್ಯ ಹೊರಬರಲೇಬೇಕು ಎಂಬ ಕಾರಣಕ್ಕೆ ನಾನೇ ಸ್ವತಃ ದೂರು ನೀಡಿದ್ದೇನೆ. ಇದರ ಹಿಂದೆ ಯಾರಿದ್ದಾರೆ ಮತ್ತು ಇದೊಂದು ಸುಳ್ಳು ಪ್ರಕರಣ ಎಂಬುದು ಜನರಿಗೆ ತಿಳಿಯಬೇಕು," ಎಂದು ಅವರು ಇಲ್ಲಿ ಸುದ್ದಿಗಾರರಿಗೆ ಹೇಳಿದರು.

ಈ ವಿಷಯವು ಹೆಚ್ಚು ಪ್ರಚಾರವಾಗದಂತೆ ತಡೆಯಲು ತಾವು ಸಿವಿಲ್ ನ್ಯಾಯಾಲಯದ ಮೊರೆ ಹೋಗಿ, ತಡೆಯಾಜ್ಞೆಯನ್ನು ಪಡೆದುಕೊಂಡಿರುವುದಾಗಿ ಅವರು ತಿಳಿಸಿದರು.

ವಿಡಿಯೋದಲ್ಲಿ ಮಾಡಲಾದ ಆರೋಪಗಳಿಗೆ ಯಾವುದೇ ಆಧಾರವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. "ಇದರಲ್ಲಿ ಯಾವುದೇ ಸತ್ಯಾಂಶವಿಲ್ಲ. ಇದು ಸಂಪೂರ್ಣವಾಗಿ ಕಟ್ಟುಕಥೆ. ಇದೊಂದು ಸುಳ್ಳು ಪ್ರಕರಣ," ಎಂದು ಅವರು ಹೇಳಿದರು. ಸೆಪ್ಟೆಂಬರ್ 26 ರಂದು ವಿಡಿಯೋ ವೈರಲ್ ಆದ ನಂತರ ತಮಗೆ ಈ ವಿಷಯದ ಬಗ್ಗೆ ತಿಳಿಯಿತು ಎಂದು ಹೇಳಿದ ಕಾಂಗ್ರೆಸ್ ನಾಯಕ, ತಮ್ಮ ವರ್ಚಸ್ಸನ್ನು ಹಾಳುಮಾಡುವ ಈ ಪ್ರಯತ್ನ ಯಶಸ್ವಿಯಾಗುವುದಿಲ್ಲ ಎಂದು ಪ್ರತಿಪಾದಿಸಿದರು.

'ವಿಶೇಷ ತನಿಖಾ ತಂಡ' (SIT) ರಚಿಸುವ ಅಗತ್ಯವಿದೆಯೇ ಎಂಬ ಪ್ರಶ್ನೆಯನ್ನು ತಳ್ಳಿಹಾಕಿದ ಅವರು, ಈಗ ನಡೆಯುತ್ತಿರುವ ತನಿಖೆಯಲ್ಲೇ ಸತ್ಯಾಂಶಗಳು ಹೊರಬರಬೇಕು ಎಂದು ಹೇಳಿದರು.

"ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ತನಿಖೆಯ ಮೂಲಕ ಪತ್ತೆಹಚ್ಚಬೇಕು. ಅವರು ನಮ್ಮ ಪಕ್ಷದವರೇ ಅಥವಾ ಬೇರೆ ಪಕ್ಷದವರೇ ಎಂಬುದು ತನಿಖೆಯಿಂದ ಸ್ಪಷ್ಟವಾಗಬೇಕು," ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದರು.

ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ, ಮುಖ್ಯಮಂತ್ರಿಯಾಗಿ ಎರಡು ಅವಧಿಗಳನ್ನು ಒಳಗೊಂಡಂತೆ, ಇಂತಹ ಯಾವುದೇ ಘಟನೆ ನಡೆದಿರಲಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

### ಎಚ್ಡಿಕೆ ನನ್ನ ಪರ ನಿಲ್ಲುವ ಅಗತ್ಯವೇನಿದೆ?



ಈ ವಿಷಯದಲ್ಲಿ ಸಿದ್ದರಾಮಯ್ಯ ಅವರ ಪರವಾಗಿ ನಿಲ್ಲುವುದಾಗಿ ಜೆಡಿ(ಎಸ್) ನಾಯಕ ಹಾಗೂ ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಮಾಜಿ ಮುಖ್ಯಮಂತ್ರಿ, "ನನ್ನ ಪರವಾಗಿ ಯಾರಾದರೂ ನಿಲ್ಲುವ ಅಗತ್ಯವೇನಿದೆ? ಅವರು ಹಾಗೆ ಹೇಳಿರಬಹುದು, ಆದರೆ ಈ ವಿಷಯದಲ್ಲಿ ಯಾರೂ ನನ್ನ ಪರವಾಗಿ ನಿಲ್ಲುವ ಅಗತ್ಯವಿಲ್ಲ. ಜನರಿಗೆ ಮತ್ತು ಇಡೀ ರಾಜ್ಯಕ್ಕೆ ಸತ್ಯ ತಿಳಿಯಬೇಕು; ಇದೊಂದು ಸುಳ್ಳು ಪ್ರಕರಣ," ಎಂದರು.



"ಈ 'ಸ್ಟಿಂಗ್ ಆಪರೇಷನ್' ವಿಡಿಯೋ ಕುರಿತು ಮಾತನಾಡಿದ ಸಿದ್ದರಾಮಯ್ಯ, ಇದರ ಹಿಂದೆ ಮಂಗಳೂರಿನ ಮಹಿಳಾ ರಾಜಕೀಯ ನಾಯಕಿಯೊಬ್ಬರು (ಇವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು ಎಂದು ಹೇಳಲಾಗಿದೆ) ಹಾಗೂ ಕನ್ನಡ ಸುದ್ದಿ ವಾಹಿನಿಯ ಮುಖ್ಯಸ್ಥರೊಬ್ಬರು ಇದ್ದಾರೆ."

■ ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿ

### ನ್ಯಾಯಾಲಯದಿಂದ ತಡೆಯಾಜ್ಞೆ

**ಕಳೆದ ತಿಂಗಳ ಕೊನೆಯಲ್ಲಿ, ಸಿದ್ದರಾಮಯ್ಯ ಅವರ ವಿರುದ್ಧ ಗಂಭೀರ ಆರೋಪಗಳನ್ನು ಒಳಗೊಂಡ ಎರಡು ವಿಡಿಯೋಗಳನ್ನು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಲಾಗಿತ್ತು. ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ, ಈ ವಿಡಿಯೋಗಳ ಬಗ್ಗೆ ವರದಿ ಮಾಡದಂತೆ ಮಾಧ್ಯಮಗಳಿಗೆ ನಿರ್ಬಂಧ ವಿಧಿಸುವ ತಡೆಯಾಜ್ಞೆಯನ್ನು ನ್ಯಾಯಾಲಯದಿಂದ ಪಡೆದಿದ್ದಾರೆ. ತನಿಖೆ ನಡೆಸುವಂತೆ ಕೋರಿ ಅವರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.**



## ಗುತ್ತಿ ಬಸವಣ್ಣ ಕಾಲುವೆಗೆ ನೀರು ಆಗ್ರಹಿಸಿ ರೈತರ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ತಾಲೂಕಿನ ತಾಂಬಾ ಗ್ರಾಮದ ಸಂಗನಬಸವೇಶ್ವರ ವೃತ್ತದಲ್ಲಿ ಗುತ್ತಿ ಬಸವಣ್ಣ ಕಾಲುವೆಗೆ ನೀರು ಹರಿಸಬೇಕೆಂದು ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಯಿತು.

ಬಂದ ನಿಮಿತ್ಯ ಬೆಳಗ್ಗೆ 9 ರಿಂದ 3 ಗಂಟೆಯ ವರೆಗೆ ಬೇರೆ ಪಟ್ಟಣ ಮತ್ತು ಗ್ರಾಮಗಳಿಗೆ ಹೋಗುವ ವಾಹನಗಳು ಹೋಗದೇ ಪ್ರಯಾಣಿಕರು ಪರದಾಡಬೇಕಾಯಿತು.

ವ್ಯಾಪಾರಸ್ಥರು ಬಂದದಲ್ಲಿ ಭಾಗವಹಿಸಿ ಬೆಂಬಲ ನೀಡಿದರು.

ರೈತ ಮುಖಂಡ ಶಿವರಾಜ ಕೆಂಗನಾಳ ಮಾತನಾಡಿ 0 ಕಿಮಿ ಯಿಂದ 97 ಕಿ ಮಿ ವರೆಗೆ ಮಾತ್ರ ನೀರು ಬರುತ್ತದೆ ತಾಂಬಾ ಮತ್ತು ಸುತ್ತಲಿನ ಗ್ರಾಮಗಳು ಮತ್ತು ಕಾಲುವೆ ಕೊನೆಯ ಭಾಗದ ವರೆಗೂ ನೀರು ಹರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆ ಮಾಡಿದಾಗ ಒಂದು ದಿನ ನೀರು ಬಿಟ್ಟು ಮತ್ತೆ ನೀರು ಬಿಡುವದಿಲ್ಲ. ಹೀಗಾಗಿ ರೈತರಿಗೆ ಮೋಸಮಾಡಬಾರದು. ನೀರು ಕುಡಿಯಲು ಅವಶ್ಯ ಇದೆ. ಜನ ಜಾನುವಾರುಗಳಿಗೆ ತೊಂದರೆ ಪರಿಗಣಿಸಿ ನೀರು ಬಿಡಬೇಕು ಎಂದರು.

ಮಲಕಣ್ಣ ನಾವದಗಿ, ಕರ್ನಾಟಕ ರೈತ ಸಂಘ ಮತ್ತು ಹಸಿರು ಸೇನೆಯ ಎಸ್.ಬಿ.ಕಂಬೋಗಿ, ಗ್ರಾ.ಪಂ ಮಾಜಿ ಅಧ್ಯಕ್ಷ ರಾಜಶೇಖರ ಗಂಗನಹಳ್ಳಿ,ಆರ್.ಎಸ್.ಪೂಜಾರಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಶಿರಶ್ಯಾಡದ ಅಭಿನವ ಮುರಗೇಂದ್ರ ಶಿವಾಚಾರ್ಯರರು, ಬಂಥನಾಳದ ಶ್ರೀ ಸಂಗನಬಸವ ದೇವರು, ರಾಕೇಶ ಬಾಗಲಕೋಟ, ಮಲ್ಲಿಕಾರ್ಜುನ ಹೊರ್ತಿ, ಸುರೇಶ ನಡಗಡ್ಡಿ, ಮಾಸಿಮ ವಾಲಿಕಾರ, ಶಂಕರ ಪ್ಯಾಟಿ, ಚಂದ್ರಶೇಖರ ರೊಟ್ಟಿ ಮತ್ತಿತರಿದ್ದರು.

ಅಭಿಯಂತರ ರವಿ ಸೋಲಾಪುರ ಸ್ಥಳಕ್ಕೆ ಭೇಟಿ ನೀಡಿ ಇಂದು ಹಳ್ಳಕ್ಕೆ ನೀರು ಬಿಡಲಾಗಿದೆ. ವಾರಾಬಂದಿ ಮುಗಿದ ನಂತರ ಕಾಲುವೆಗೆ ನೀರು ಬಿಡುವದಾಗಿ ತಿಳಿಸಿದರು.

# ಐತಿಹಾಸಿಕ ರಾವುತರಾಯ-ಮಲ್ಲಯ್ಯ ಜಾತ್ರೆ ಆರಂಭ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಅಶ್ವಾರೂಢ ರಾವುತರಾಯ ಬಂಡಿಯಲ್ಲಿ ಆಸೀನನಾಗಿ ಮಲ್ಲಯ್ಯನ ದೇವಸ್ಥಾನಕ್ಕೆ ತೆರಳುವುದರೊಂದಿಗೆ ಐತಿಹಾಸಿಕ ರಾವುತರಾಯ-ಮಲ್ಲಯ್ಯ ಜಾತ್ರೆ ಆರಂಭಗೊಂಡಿತು.

ಪಟ್ಟಣದ ಸರ್ವಜನಪೂಜಿತ ರಾವುತರಾಯ ಶುಕ್ರವಾರ ನಸುಕಿನ ಮೂರು ಗಂಟೆಗೆ ಅಶ್ವಾರೂಢನಾಗಿ ತೆರೆದ ಬಂಡಿಯಲ್ಲಿ ಆಸೀನನಾಗಿ ಮೂಲ ದೇವಸ್ಥಾನದಿಂದ ಹೊರಟು ಬೆಳಗಿನ 8 ಗಂಟೆಗೆ ಮಾನೆದೊಡ್ಡಿ ಎಂದೇ ಕರೆಯಲಾಗುವ ಸ್ಥಳದಲ್ಲಿ ನೂರಾರು ಭಕ್ತರು ಕಾಲ್ನಡಿಯಿಂದ ಹೊತ್ತು ತಂದ ಹೂಹಾರಗಳಿಂದ ಅಲಂಕಾರಗೊಂಡನು. ಇದನ್ನು ಹೂ ಮುಡಿಯುವುದು ಎಂದೇ ಕರೆಯಲಾಗುತ್ತದೆ. ನಂತರ ಶೀಡಗಟ್ಟಿ ಎಂಬ ಸ್ಥಳದಲ್ಲಿ ಕಾರಣಿಕರು ಮುಂಬರುವ ಭವಿಷ್ಯದ ಕುರಿತಾಗಿ ಹೇಳಿಕೆಗಳು ಹೇಳಲ್ಪಟ್ಟವು.

ಕಾರಣಿಕರ ಹೇಳಿಕೆಗಳು: ಭಕ್ತಿ, ಭಾವದೊಂದಿಗೆ ಶುದ್ಧವಾಗಿ ನಡೆದರೇ ಅಂಗೈನಲ್ಲಿ ಲಿಂಗದಂಗ ಜೋಕಿ ಮಾಡತೀನಿ. ಮಳೆ ಇಲ್ಲ ಅಂತ ಕೊರಗಬ್ಯಾಡ್ರಿ, ಮುತ್ತಿನ ಜಾಳಗಿ ಹಾಕಿ ಸರ್ವಾ ಸರ್ವ ಮಳಿ ಕೊಡ್ತೀನಿ. ಸಾತಿ, ಇಸಾಕಿ ಮಳಿ ಒಂದ ಸರ್ವ ಕೊಡ್ತೀನಿ. ಬಿಳಿಕಾಳ ಕಟ್ಟಿ ಒಕ್ಕಲಾಯಿತು. ಕುಸುಬಿ, ಅಗಸಿ ಬೆನ್ನ ಹತ್ತಿದವು. ಚಂಡ ಮಾರುತ ಎಬ್ಬಿಸಿ ಒಂದು ಸರ್ವ ಮಳಿ ಕೊಡುತ್ತೇನೆ. ಜನಪಿಡ ಹೆಚ್ಚಾಯಿತು. ಮಳೆ ಕಮ್ಮಿ ಆಯ್ತು, ಯುದ್ಧ ಬೆನ್ನ ಹತ್ತುತು. ಜೋಡು ಬಾಂಬು ಬೀಳುತಾವ ಹುಷಾರ್, ಆದರೂ ಕಷ್ಟ ಕಾಲ ಬಂತು. ಬೇಕಾದ ಕಷ್ಟ ಬಂದರೂ ದೂರ ಮಾಡ್ತೀನಿ. ಎಷ್ಟ್ ಹೇಳಿದ್ರು ಕರಿತೇಲಿ ಮಾನವನಿಗೆ ಬುದ್ಧಿ ಬರಲಿಲ್ಲ. ನಾ ಅನ್ನೋದು ಹೆಚ್ಚಾಯಿತು. ನಾ ಅಂದವನ ತುಳಿತಿನಿ. ಒಕ್ಕಲಿಗ ಬಾಳ ಕಷ್ಟ ಬಂತು. ಎಷ್ಟೆ ಕಷ್ಟ ಬಂದರೂ ನಾ ಕೈಹಿಡಿದು ಕಾಪಾಡುತ್ತೀನಿ. ಹತ್ತು ಮಂದಿ ಒಟ್ಟಾಗಿ ಕೂಡಿ ನನ್ನನ್ನು ಸಿಂಹಾಸನಕ್ಕ ಹಚ್ಚರಿ" ಎಂದು ಹೇಳಲಾಯಿತು.

ನಂತರ ರಾವುತರಾಯ ಬಂಡಿ ಮೆರವಣಿಗೆ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಬನ್ನಿ ಮಹಾಕಾಳಿ ವೃಕ್ಷಕ್ಕೆ ತೆರಳಿ ಬನ್ನಿ ಮುಡಿದು ಮಲ್ಲಯ್ಯನ ದೇವಸ್ಥಾನ ತಲುಪಿತು. ಆನಂತರ ರಾವುತರಾಯ- ಗಂಗಿಮಾಳಮ್ಮರ ಮದುವೆಯ ಸಾಂಪ್ರದಾಯಿಕ ರೂಪಕ ಜರುಗಿತು. ಸತತ ಐದು ದಿನಗಳ ಕಾಲ ಜರುಗುವ ಜಾತ್ರಾ ಮಹೋತ್ಸವದ ಮೊದಲ ದಿನ ರಾವುತರಾಯನು ಮಲ್ಲಯ್ಯನ ದೇವಸ್ಥಾನದಲ್ಲಿ ಆಸೀನನಾಗುವುದರೊಡನೆ ಜಾತ್ರೆಗೆ ಚಾಲನೆ ದೊರಕಿತು.

ಜಾತ್ರೆಯ ಅಂಗವಾಗಿ ನಾಟಕ ಕಂಪನಿ, ನೂರಾರು ಮಾರಾಟ ಮಳಿಗೆಗಳು ಹಾಗೂ ಮಕ್ಕಳ ಮನರಂಜನೆಯ ಸಾಧನಗಳ ತಯಾರಿ ಭರದಿಂದ ಆರಂಭಗೊಂಡಿರುವುದು ಕಂಡು ಬಂತು.



## ಆತ್ಮಸ್ಥೈರ್ಯ, ಸಾಹಸದ ಪ್ರತೀಕ ಚೆನ್ನಮ್ಮ :ಚಿದಾನಂದ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಮಹಿಳೆಯರು ಅಡುಗೆ ಮನೆಗೆ ಸೀಮಿತವಾಗಿದ್ದ ಕಾಲದಲ್ಲಿ ಎಲ್ಲ ಕಟ್ಟುಪಾಡುಗಳನ್ನು ಮೀರಿ ಖಡ್ಗ ಹಿಡಿದು ಬ್ರಿಟೀಷರ ವಿರುದ್ಧ ಹೋರಾಡಿದ ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ. ಅವರ ಸಾಹಸ, ಧೈರ್ಯ ಮತ್ತು ಆತ್ಮಸ್ಥೈರ್ಯದ ಗುಣಗಳನ್ನು ಕೇವಲ ಜಯಂತಿ ಕಾರ್ಯಕ್ರಮಗಳಿಗೆ ಸೀಮಿತಗೊಳಿಸದೆ, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಇಂಡಿ ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಹೇಳಿದರು. ಇಂಡಿ ಮಿನಿ ವಿಧಾನಸೌಧದ ಆವರಣದಲ್ಲಿ ಚಡಚಣ,ಇಂಡಿಹಾಗೂಸಿಂದಗಿತಾಲೂಕುಗಳಅಧಿಕಾರಿಗಳು ಮತ್ತು ವಿವಿಧ ಸಮುದಾಯಗಳ ಪ್ರತಿನಿಧಿಗಳ ಸಹಯೋಗದಲ್ಲಿ ಆಯೋಜಿಸಿದ್ದ ವೀರಮಾತೆ ಕಿತ್ತೂರು ರಾಣಿ ಚೆನ್ನಮ್ಮ ಅವರ 248ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ರಾಣಿ ಚೆನ್ನಮ್ಮ ಅವರು ಮಹಿಳೆಯರು ಅಬಲೆಯರಲ್ಲ, ಸವಾಲುಗಳನ್ನು ಎದುರಿಸಿ ಹೋರಾಡುವ ಸಾಮರ್ಥ್ಯ ಹೊಂದಿದ್ದಾರೆ ಎಂಬುದನ್ನು ತಮ್ಮ ಜೀವನದ ಮೂಲಕ ಸಾಬೀತುಪಡಿಸಿದ್ದಾರೆ. ಅವರ ಧೈರ್ಯ, ಸಾಹಸ ಮತ್ತು ಹೋರಾಟದ ಮನೋಭಾವ ಇಂದಿನ ಮಹಿಳೆಯರಿಗೆ ಆತ್ಮಸ್ಥೈರ್ಯ ತುಂಬುವ ಶಕ್ತಿಯಾಗಿವೆ. ಅವರ ಆದರ್ಶಗಳನ್ನು ಯುವಜನತೆ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಜಯಂತಿ ಆಚರಣೆಗೆ ನಿಜವಾದ ಅರ್ಥ ಬರುತ್ತದೆ ಎಂದು ಹೇಳಿದರು. ಇಂಡಿ ತಹಸೀಲ್ದಾರ್ ಮಾತನಾಡಿದರು. ಈ ಸಂದರ್ಭದಲ್ಲಿ ವಾಯ್.ಜಿ. ಬಿರಾದಾರ ಅವರು ರಾಣಿ ಚೆನ್ನಮ್ಮ ಅವರ ಜೀವನ, ಹೋರಾಟ ಹಾಗೂ ಐತಿಹಾಸಿಕ ಸಾಧನೆಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಹಾದೇವ ಎವುರ, ಬಾಳು ಮುಳಜಿ, ಬಸವರಾಜ ರಾವೂರ, ಬಿ.ಎಚ್. ಬಿರಾದಾರ, ಎಸ್.ಆರ್. ಬಿರಾದಾರ, ಸಂತೋಷ ಹೋಟಗಾರ, ಆರ್.ಬಿ. ಮೊಗಿ, ವೀಣಾ ಕೋಳೂರಗಿ, ಸೌಜನ್ಯ ಪಾಟೀಲ, ಸೌಮ್ಯ ಚಾಂದಕವಟೆ, ಎಚ್. ಎಚ್. ಗುನ್ನಾಪುರ, ಪಿ.ಎಸ್. ಚೌಡಿಹಾಳ, ಎಸ್.ಎಸ್. ಪೂಜಾರಿ ಸೇರಿದಂತೆ ವಿವಿಧ ಇಲಾಖೆಗಳ ಸಿಬ್ಬಂದಿ ಹಾಗೂ ಗಣ್ಯರು ಉಪಸ್ಥಿತರಿದ್ದರು.

# 371 ಜೆ ಸೌಲಭ್ಯ ದೊರಕದಿದ್ದರೆ ಉಗ್ರ ಹೋರಾಟ ಅನಿವಾರ್ಯ

■ ಉದಯರಶ್ಮಿ ದಿನಪತ್ರಿಕೆ




ಸಿಂದಗಿ: ಉಚ್ಚ ನ್ಯಾಯಾದಿಕರಣ ಕಲಬುರ್ಗಿಯಲ್ಲಿರುವ ಹೈಕೋರ್ಟಗೆ ಸೇರಿಸಿದ್ದಾರೆ. ವಿಜಯಪುರ ಜಿಲ್ಲೆ ಈಶಾನ್ಯ ಕರ್ನಾಟಕದಲ್ಲಿದೆ. ಡಾ. ಡಿ. ಎಂ.ನಂಜುಂಡಪ್ಪ ವರದಿಯಲ್ಲಿರುವ ಸಂವಿಧಾನದ 98 ತಿದ್ದುಪಡಿಯಲ್ಲಿ ಜಿಲ್ಲೆಯ ತಾಲೂಕುಗಳು ಅತೀ ಹಿಂದೂಳಿದ ಪ್ರದೇಶಗಳೆಂದು ಪರಿಗಣಿಸಿಲಾಗಿದ್ದರು ಕೂಡಾ 371 (ಜೆ) ಸೇರಿಲ್ಲ ಅಂದರೆ ನಮ್ಮನ್ನು ಯಾವ ರೀತಿಯಲ್ಲಿ ತುಳಿದಿದ್ದಾರೆ ಎನ್ನುವುದಕ್ಕೆ ಇದುವೇ ಜೀವಂತ ಸಾಕ್ಷಿ. ಇವುಗಳೆಲ್ಲ ಕಾರಣಕ್ಕೆ ಕಲ್ಯಾಣ ಕರ್ನಾಟಕಕ್ಕೆ ನೀಡುವ ಸೌಲಭ್ಯಗಳಿಗೆ ಅಳವಡಿಸಿ ಈ ಜಿಲ್ಲೆಯನ್ನು ಶೈಕ್ಷಣಿಕ, ಔದ್ಯೋಗಿಕ ಕ್ರಾಂತಿಗೆ ನಾಂದಿ ಹಾಡಬೇಕು ಇಲ್ಲದಿದ್ದರೆ ಉಗ್ರವಾದ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ ಎಂದು ಅನುಗೃಹ ಕಣ್ಣಿನ ಆಸ್ಪತ್ರೆಯ ಡಾ. ಪ್ರಭುಗೌಡ ಪಾಟೀಲ ಚಬನೂರ ಸರಕಾರಕ್ಕೆಣಟಿಜಜಜಿಟಿಜಜ ಎಚ್ಚರಿಕೆ ನೀಡಿದರು.

ನಗರದ ಶ್ರೀ ಬಸವೇಶ್ವರ ವೃತ್ತದ ಬಳಿ ರೇ.ಚ.ರೆವಡಿಗಾರ ಪ್ರತಿಷ್ಠಾನ ನೇತೃತ್ವದಲ್ಲಿ 371 ಜೆ ಹೋರಾಟ ಸಮಿತಿ ಕಳೆದ 21 ದಿನಗಳಿಂದ ನಿರಂತರವಾಗಿ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಗೋಲಗೇರಿ, ದಸಂಸ, ಹನುಮಾನ ದೆವಸ್ಥಾನ ಸೇವಾ ಸಮಿತಿಯ ನಿವೃತ್ತ ನೌಕರರ ಸಂಘ ಬೆಂಬಲ ಸೂಚಿಸಿದ ಸಂದರ್ಭದಲ್ಲಿ ಅವರು ಮಾತನಾಡಿ, ಮುಂದಿನ ಹೋರಾಟಗಳಿಗೆ ದೇವರ ಹಿಪ್ಪರಗಿ ಮತಕ್ಷೇತ್ರದಿಂದ ಹೆಚ್ಚಿನ ಸಂಖ್ಯೆ ಕರೆ ತರುವ ಮೂಲಕ ಬೀದಿಗಿಳಿದು ಹೋರಾಟಕ್ಕೆ ಅಣಿಯಾಗೋಣ ಎಂದರು.

ದಲಿತ ಮುಖಂಡ ಹುಯೋಗಿ ತಳ್ಳೊಳ್ಳಿ, ಕೊರವಾರ ಗ್ರಾಮದ ಕಾಂಗ್ರೆಸ್ ಧುರೀಣ ಸಂಗಮೇಶ ಛಾಯಾಗೋಳ ಮಾತನಾಡಿ ಡಾ. ನಂಜುಂಡಪ್ಪ ವರದಿ 371 ಜೆ ಅನ್ವಯವಾಗುವ ಎಲ್ಲ ಅರ್ಹತೆಗಳು ನಮ್ಮಲ್ಲಿವೆ. ಹೋರಾಟದಿಂದ ಬಿಕ್ಷೆ ಕೇಳುತ್ತಿಲ್ಲ ಹಕ್ಕು ಹೇಳುತ್ತಿದ್ದೇವೆ ಅದು ಜಾರಿಯಾಗುವರೆಗೂ ಹೋರಾಟ ಕೈಬಿಡುವ ಮಾತೇ ಇಲ್ಲ ಎಂದರು.

ಈ ವೇಳೆ ನಾಗಾವಿಯ ತಮ್ಮನಗೌಡ ಬಿರಾದಾರ, ಪಿಕಾರ್ಡ ಬ್ಯಾಂಕ ಅಧ್ಯಕ್ಷ ಶಿವು ಹತ್ತಿ, ದಸಂಸ ಜಿಲ್ಲಾ ಸಂಚಾಲಕ ಶ್ರೀಶೈಲ ಜಾಲವಾದಿ, ಬಗವಂತ ರೇವೂರ ವಕೀಲರು, ಆಕ್ಸಪರ್ಡ ಶಿಕ್ಷಣ ಸಂಸ್ಥೆಯ ಪ್ರಕಾಶ ಚೌದರಿ, ಪಿ.ಎಸ್.ಕಂಠಿಗೊಂಡ, ರವಿ ದೇವರಮನಿ, ಹನುಮಾನ ಸೇವಾ ಸಮಿತಿಯ ಬಿ.ಸಿ.ಹಿರೇಮಠ, ಶರಣಪ್ಪ ಸುಂಗಠಾಣ, ಎಸ್.ಎಲ್.ಪಾಟೀಲ, ಎಸ್.ಬಿ.ಮುರಗಾನೂರ, ಸಮಿತಿಯ ರಂಘನಾಥ ತೋರ್ಪೆ, ಪಂಡಿತ ಯಂಪೂರೆ, ದಾನಪ್ಪಗೌಡ ಚನಗೊಂಡ, ಗುರುರಾಜ ಪಡಶೆಟ್ಟಿ ಸೇರಿದಂತೆ ಅನೇಕರು ಮಾತನಾಡಿದರು.

ಈ ಸಂದರ್ಭದಲ್ಲಿ ರಾಮಚಂದ್ರ ರಾಠೋಡ, ಬಿ.ಎಸ್.ಡಿಗ್ಗಿ, ಎ.ಎಸ್.ರುಕುಂಪುರ, ಜೆ.ಎ.ಬಜಂತ್ರಿ, ಎಚ್.ಎಂ.ಗುಡಿಮನಿ, ಹೋರಾಟದ ಸಮಿತಿಯ ಶಂಕರ ಮಲ್ಲೇದ, ರಂಘನಾಥ ತೋರ್ಪೆ, ಎಂ.ಎಂ.ಹಂಗರಗಿ, ಸಿದ್ದು ಕಡಗಂಚಿ, ಸಂಗಣ್ಣ ಬ್ಯಾಕೋಡ, ಆನಂದ ಶಾಬಾದಿ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ಸಿಂದಗಿಯಲ್ಲಿ 21 ದಿನಗಳಿಂದ ನಡೆದ 371 ಜೆ ಹೋರಾಟದಲ್ಲಿ ಕಾಂಗ್ರೆಸ್ ಮುಖಂಡ ಡಾ.ಪ್ರಭುಗೌಡ ಪಾಟೀಲ ಚಬನೂರ ಎಚ್ಚರಿಕೆ**

# ವಿಜಯನಗರದಿಂದ ಮೈಸೂರುವರೆಗೂ ಹಬ್ಬಿದ ರವೀಂದ್ರನಾಥರ ಕನ್ನಡ ಸೇವೆ

**ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ (ಸಿಐಐಎಲ್) ಕನ್ನಡ ಭಾಷಾ ಯೋಜನಾಧಿಕಾರಿಯಾಗಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಕೆ.ರವೀಂದ್ರನಾಥ ನೇಮಕ ತನ್ನಿಮಿತ್ತ ವಿಶೇಷ ಲೇಖನ**

■ ದಯರಶ್ಮಿ ದಿನಪತ್ರಿಕೆ

ಕನ್ನಡ ನೆಲ ತನ್ನ ಹಿರಿಮೆ-ಗರಿಮೆಯಿಂದ ಅನೇಕ ಸಂಶೋಧಕ, ಇತಿಹಾಸಕಾರರಿಗೆ ಸ್ಪೂರ್ತಿ ಹಾಗೂ ಪ್ರೇರಣೆ ನೀಡಿದೆ. ನಾಡ ಉದ್ದಗಲಕ್ಕೂ ಸಂಚರಿಸುವಂತೆ ಮಾಡಿ ಹೊಸ ಬೆಳಗಿನತ್ತ ಕುತೂಹಲಿಗಳನ್ನಾಗಿಸಿದೆ. ವಿಶ್ವವಿದ್ಯಾಲಯಗಳು ಸಂಶೋಧನೆ, ಸಂಪಾದನೆ, ಚಾರಿತ್ರಿಕ,ಶಾಸನ ಇಂತಹ ಅನೇಕ ಸಂಗತಿಗಳ ಬಗೆಗೆ ಶಾಸ್ತ್ರೀಯವಾಗಿ ಅಧ್ಯಯನ ಮಾಡುತ್ತ ಬಂದಿವೆ. ಎಲ್ಲ ವಿವಿಗಳ ಗುರಿ ಉದ್ದೇಶಗಳು ಒಂದೇ ಆಗಿದ್ದರೂ ಅವುಗಳ ಕಾರ್ಯ ವೈಖರಿ ಭಿನ್ನವಾಗಿದೆ. ಭಾರತದಲ್ಲಿರುವ ವಿವಿಗಳಲ್ಲಿ ಕನ್ನಡ ವಿಶ್ವವಿದ್ಯಾಲಯ

(ಹಂಪಿ) ಬಲು ಅಪರೂಪದ ವಿವಿಯಂತೆ ಕಾಣುತ್ತದೆ. ಈ ಮಾತಿನ ಅಸಲಿ ಇಷ್ಟೆ! ಕನ್ನಡ ವಿವಿಯು ಹುಟ್ಟು ಪಡೆದ ಉದ್ದೇಶ, ನೋಟ ಹಾಗೂ ಆಲೋಚನೆ ಮತ್ತು ಯೋಜನೆ ನಾಡಿನಲ್ಲಿರುವ ವಿವಿಗಳಲ್ಲೆ ಬೇರೆಯಾಗಿಯೇ ಇದೆ. ಡಾ. ಚಂದ್ರಶೇಖರ ಕಂಬಾರರು, ಡಾ. ಎಂ.ಎಂ.ಕಲಬುರ್ಗಿ ಅವರಂತಹ ಚತುರ ವಿದ್ವಜ್ಜನರ ಮಹತ್ವಾಕಾಂಕ್ಷೆಯ ಕೂಸು ಎಂದರೆ ಅಲ್ಲಗಳೆಯುವ ಮಾತೇ ಇಲ್ಲ. ಈ ತೆರನಾಗಿ ಹುಟ್ಟಿ ಬೆಳೆದ ವಿವಿಯು ಮೇಧಾವಿ ವಿದ್ವಾಂಸರ ಪಡೆಯನ್ನೆ ಹೊಂದುತ್ತ ಬಂದಿದೆ. ಅಲ್ಲಿರುವ ಹಲವು ವಿಭಾಗಗಳಲ್ಲಿ ಹಸ್ತಪ್ರತಿಶಾಸ್ತ್ರ ತನ್ನ ಅಮೂಲ್ಯ ಪ್ರಾಚೀನ ಭಂಡಾರದಿಂದ ಇಡೀ ವಿಶ್ವವಿದ್ಯಾಲಯಕ್ಕೆ ಮೆರುಗು ನೀಡುತ್ತಿದೆ. ಹತ್ತತ್ರ ಎರಡು ವರ್ಷಗಳ ಹಿಂದೆ ಇದೇ ವಿಭಾಗದಿಂದ ಬರೀ ವಯೋ ನಿವೃತ್ತಿ ಹೊಂದಿದವರು ಪ್ರೊ. ಕೆ.ರವೀಂದ್ರನಾಥರು.

ಇವರು ಸಂಶೋಧನೆ, ಸಂಪಾದನಾ ಶಾಸ್ತ್ರ, ಹಸ್ತಪ್ರತಿ ಶಾಸ್ತ್ರಗಳಂತಹ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ದಿನದ ಬಹುತೇಕ ಸಮಯ ಅಧ್ಯಯನ, ಅಧ್ಯಾಪನ, ಕ್ಷೇತ್ರಕಾರ್ಯ ಹಾಗೂ ಶರಣ ಸಾಹಿತ್ಯ ಸಂಘಟನೆಯಲ್ಲಿ ಮೀಸಲಾದವರು. ಇದರ ಜೊತೆಗೆ ವಿದ್ಯಾರ್ಥಿಸ್ನೇಹಿ ಪ್ರಾಧ್ಯಾಪಕರಾಗಿ ಸಾವಿರಾರು ಸಂಶೋಧನಾರ್ಥಿಗಳ ಅಚ್ಚುಮೆಚ್ಚಿನ ಪ್ರೊಫೆಸರ್. ಅಲ್ಲದೇ ಕತ್ತಲೆಯಲ್ಲಿ ಬೆಳಕಿನ ಹುಡುಕಾಟಕ್ಕಾಗಿ ಅಲೆದಾಡುತ್ತಿರುವ ಅಂಬೆಗಾಲಿನ ಸಂಶೋಧನಾರ್ಥಿಗಳಿಗೆ ಈಗೋ! ಅಲ್ಲಿದೆ ನೋಡು ಬೆಳಕು!! ಎಂದು ಹೊಸಬೆಳಕಿನ ಹಾದಿ ತೋರಿ ಗಟ್ಟಿ ಹೆಜ್ಜೆ ಹಾಕಲು ಸ್ಪೂರ್ತಿ ಹಾಗೂ ಪ್ರೇರಣೆ ನೀಡಿದವರು. ಈಗಲೂ



ಅವರು ಈ ಕಾರ್ಯವೈಖರಿಯಿಂದ ವಿಮುಖರಾಗಿಲ್ಲ. ಅದಕ್ಕಂತೆ ನಾ ಈ ಮೊದಲು ಹೇಳಿದೆನಲ್ಲಾ ಬರೀ ವಯೋ ನಿವೃತ್ತಿ ಅಷ್ಟೇ. ಪ್ರವೃತ್ತಿ ಮಾತ್ರ ನಿತ್ಯ, ನಿರಂತರ ನೂತನವಾಗಿರಿಸಿ ಸಾಗುವವರು. ಎಷ್ಟೋ ಸರ್ಕಾರಿ ಜನ ತಮ್ಮ ಅರವತ್ತರ ವಯೋಕಾಲದ ಸಮಯಕ್ಕಾಗಿ ಕಾದು ಅದಾದ ಬಳಿಕ ವಿಶ್ರಾಂತಿಯ ಜೀವನ ನಡೆಸಿ ಕುಟುಂಬದೊಂದಿಗೆ ಇಡೀ ಸಮಯವೇ ಕಳೆಯುವ ಅವಕಾಶವನ್ನು ಬಳಸಿಕೊಂಡು ಬಿಡುವುದು ಸಾಮಾನ್ಯವಾಗಿರುತ್ತದೆ. ಆದರೆ ಪ್ರೊ. ಕೆ. ರವೀಂದ್ರನಾಥರು ಈ ವಿಷಯದಿಂದ ಸ್ವಲ್ಪ ದೂರ ಉಳಿದವರು. ಇವತ್ತಿಗೂ ತಮ್ಮ ಕ್ಷೇತ್ರಕಾರ್ಯದ ಮುಖೇನ ಸಂಶೋಧನೆ, ಶರಣ ಸಾಹಿತ್ಯ ಸಂಘಟನೆ, ಕಿರಿಯರಿಗೆ ಮಾರ್ಗದರ್ಶನ ಮುಂದುವರೆಸಿಕೊಂಡು ಬಂದವರು. ಏನಪ್ಪಾ ಈ ವಿದ್ವಾಂಸರ ಬಗ್ಗೆ ಇಷ್ಟೊಂದು ಬರೀತಾನೆ



ಅಂದ್ರೆ ಇವರಲ್ಲೇನು ಅಂತಹ ವಿಶೇಷ ಎಂದು ಓದುಗ ಮಿತ್ರರಿಗೆ ಅನಿಸಬಹುದು. ಅದು ಹಾಗೆ ಅನಿಸಲೇಬೇಕು. ಹೀಗನಿಸಿದಾಗ ಮಾತ್ರ ನಾ ಹೇಳಿದ್ದು ನೀವು ತಿಳಿದದ್ದಕ್ಕೂ ಬರೆದ ಪೆನ್ನು ಸಾರ್ಥಕ ಭಾವ ಅನುಭವಿಸುತ್ತದೆ. ಹಾದಿ ಬೀದಿಗಳಲ್ಲಿ ವಾದ, ಮೊಂಡುವಾದ, ತರ್ಕ, ಅರ್ಥವಿಲ್ಲದ, ಆಳ ಅಗಲಗಳಿಲ್ಲದ, ತಳಸ್ಪರ್ಶಿ ಅಧ್ಯಯನಗಳಿಲ್ಲದ ವಿದ್ವಜ್ಜನರ ಕಾರ್ಯಭಾರಗಳಿಗೆಇವತ್ತಿನ ಹೊತ್ತು ಸಾಕ್ಷಿಯಾಗಿದೆ ಎಂಬುದು ನಾನು ಗಂಟು ಬಿಚ್ಚಿ ಹೇಳಬೇಕಿಲ್ಲ. ಈ ಕಾಲದ ದಿನಗಳು ಎಲ್ಲವೂ ಎಲ್ಲರಿಗೂ ವಿದ್ವತ್ ಲೋಕ ಆಶ್ಚರ್ಯ ನೀಡುತ್ತಲೇ ಸಾಗಿದೆ. ತಮ್ಮ ತಮ್ಮ ಮೂಗಿನ ನೇರಕ್ಕೆ ಅವರವರ ಮಾತುಗಳು. ಇದೇ ಸತ್ಯ ಎಂದು ಬಲವಂತದ ಹೇರಿಕೆಯ ಪ್ರಸಂಗಗಳಿಗೆ ಬರ ಅಂತು ಇಲ್ಲವೇ ಇಲ್ಲ. ನಾಡಿನ, ದೇಶದ ಕೆಲ ಸೋ ಕಾಲ್ಡ್ ಬುದ್ಧಿ ಜೀವಿಗಳ ಅಸ್ಪಷ್ಟ , ಸಾರ್ವಕಾಲಿಕ ಸತ್ಯವಲ್ಲದ ಹೇಳಿಕೆಗಳಿಂದ ತಮ್ಮನ್ನು ತಾವು ಪ್ರಸಿದ್ಧಿ ಪಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಯಾವುದೋ ಒಂದು ಸಿದ್ಧಾಂತಕ್ಕೆ ಜೋತು ಬಿದ್ದು ಜೊತೆ ಜೊತೆಗೇ ಬೆಳದು ಬಂದ ಸಿದ್ಧಾಂತಗಳನ್ನು ಅಲ್ಲಗಳೆಯುವ ಅಥವಾ ಅವುಗಳ ಕು-ರಿತು, ವೇದಿಕೆಯ ಮೇಲೆ ಕುಹಕತನದ ಮಾತುಗಳನ್ನಾಡಿ ಕೇಳುಗ ತನಗೆ ಅರ್ಥ ಆಗದಿದ್ದರೂ ಆಯೋಜಕ ತಟ್ಟಿದ ಹಸ್ತಗಳನ್ನು ನೋಡಿ ಜೋರಾದ ಚಪ್ಪಾಳೆ ಗಿಟ್ಟಿಸಿಕೊಳ್ಳುವ ಅಥವಾ ವಿಡಂಬನೆಯ ವಿಚಾರ ಮಂಡಿಸುವ ಮೊಂಡ ವಿದ್ವಾಂಸರ ಸಾಲು ಸಾಲು ಪಟ್ಟಿಯೇ ಇದೆ. ಅದರ ಬಗ್ಗೆ ಹೆಚ್ಚು ಚರ್ಚೆ ಮಾಡಿ ಸಮಯ ಹಾಳು ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ.

ಆದರೆ ಪ್ರೊ.ಕೆ. ರವೀಂದ್ರನಾಥರು ಈ ಎಲ್ಲ ಸಂಗತಿಗಳಿಂದ ಬಲು ದೂರ ನಿಂತವರು. ತಾವು ಕೈಗೊಳ್ಳುವ ಕಾರ್ಯ ಯೋಜನೆಗಳು ಇಂತದ್ದಕ್ಕೆ ಸೀಮಿತ ಎಂದೇನಿಲ್ಲ. ಅದು ಪ್ರಾಚೀನವೇ ಇರಲಿ ಆಧುನಿಕವೇ ಇರಲಿ, ಶಾಸನವೇ ಇರಲಿ ಸಂಪಾದನ ಶಾಸ್ತ್ರವೇ ಇರಲಿ, ಹೊಸದೇ ಇರಲಿ ಹಳೆಯ ಹಸ್ತಪ್ರತಿಯೇ ಇರಲಿ, ಚಾರಿತ್ರಿಕವೇ ಇರಲಿ ವ್ಯಕ್ತಿ ಚರಿತ್ರೆಯೇ ಇರಲಿ, ಶರಣ ಸಾಹಿತ್ಯವೇ ಇರಲಿ, ಪುರಾಣ ಕಾವ್ಯವೇ ಇರಲಿ, ವೇದಾಗಮ ಶಾಸ್ತ್ರಗಳೇ ಇರಲಿ ವಚನ ಸಾಹಿತ್ಯವೇ ಇರಲಿ, ಎಲ್ಲವನ್ನೂ ಸಮಾನವಾಗಿ ಕಾಣುವ, ಅವಲೋಕಿಸುವ, ಹೊಸಬೆಳಕಿಗೆ ಅಗತ್ಯವಿರುವ ಜ್ಞಾನ ಪಡೆಯುವ ಆದರ್ಶ ವಿದ್ವಾಂಸರ ಸಾಲಿನಲ್ಲಿ ಅಗ್ರಗಣ್ಯರು ಡಾ.ಕೆ. ರವೀಂದ್ರನಾಥರು. ಅಲ್ಲದೇ ಕಿರಿಯರಿಗೆ ಮಾಡುವ ಮಾರ್ಗದರ್ಶನವೂ ವಿಶಿಷ್ಟ ರೀತಿಯದ್ದು. ಸಂಶೋಧನೆ ಕೆಲಸ ಕಠಿಣ ಎಂದು, ಕೈಗೊಂಡ ಕೆಲಸ ಬಿಟ್ಟು ಓಡಿ ಹೋಗುವ ವಿದ್ಯಾರ್ಥಿಗಳಿಗೆ ಸರಳ ದಾರಿಯ ಮೂಲಕ ಗುರಿ ತೋರಿಸಿದ ಕ್ರಿಯಾಶೀಲ ಗುರುಗಳಿವರು. ಆದರೆ ಸಂಶೋಧನಾ ಕಾರ್ಯದಲ್ಲಿ ಆಲಸ್ಯಕ್ಕೆ, ಭಾವನಾತ್ಮಕ ರೋಲ್ ಗೆ ಎಂದಿಗೂ ಆಸ್ಪದ ಕೊಟ್ಟವರಲ್ಲ. ವಿದ್ಯಾರ್ಥಿಗಳು ಆಲಸ್ಯ ಅಥವಾ ಓದಿ, ತಿಳಿಯದೇ ಬರೆದರೆ ಮುಖಕ್ಕೆ ಹೊಡೆದಂತೆ ಬೈಯ್ದು ಸಿಟ್ಟಾಗಿ ಒಂದೆರಡು ಮಾತುಗಳನ್ನಾಡಿ ಬಿಡುವರು. ಹೀಗೆಂದ ಮಾತ್ರಕ್ಕೆ ಸಿಡುಕಿನ ಸ್ವಭಾವ ದವರಂತಲ್ಲ. ನಿಜಕ್ಕೂ ತಾಯಿ ಕರುಳಿನ ಗುಣದವರು. ವಿದ್ಯಾರ್ಥಿಗಳಿಗೆ ತಂದೆ ಸ್ವರೂಪಿಗಳು. ವಿವಿ ಯಲ್ಲಿದ್ದಾಗ ಯಾರಾದರೂ ಸಂಶೋಧನಾರ್ಥಿಗಳು ಮುಖ ಸಪ್ಪಗೆ ಮಾಡಿಕೊಂಡು ಏನೋ ಸಮಸ್ಯೆ ಎದುರಿಸಿ ಅತ್ತಿತ್ತ ಅಲೆದಾಡುತ್ತಿದ್ದರೆ ಅವರನ್ನು ನಯವಾಗಿ ಮಾತಾಡಿಸಿ ಅವರ ಸಮಸ್ಯೆ ಸಾವಧಾನವಾಗಿ ಆಲಿಸಿ ಪರಿಹಾರ ಸೂಚಿಸಿದವರು. ಅಲ್ಲದೇ ಏ! ದುಡ್ಡ ಏನರೆ ಬೇಕೆನು? ಅಂದವರೆ ತಮ್ಮ ಪ್ಯಾಂಟಿನ ಜೇಬಿಗೆ ಕೈ ಹಾಕುವರು. ಇದು ಅವರಲ್ಲಿನ ವಿದ್ಯಾರ್ಥಿಗಳ ಮೇಲಿನ ಪ್ರೀತಿ, ಕಾಳಜಿ, ಕಕ್ಕುಲಾತಿ, ಅಂತಃಕರಣ ಎದ್ದು ಕಾಣುತ್ತದೆ. ಅದಕ್ಕೆಂದೆ ವಿದ್ಯಾರ್ಥಿ ಸ್ನೇಹಿ ಪ್ರಾಧ್ಯಾಪಕ ಎಂದು ಕರೆದಿದ್ದು.

ಕನ್ನಡ ವಿವಿಯ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರಾಗಿ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದವರು. ಆದರೆ

ಇತ್ತೀಚಿಗೆ ಒಂದು ಕೆಟ್ಟ ವ್ಯವಸ್ಥೆಗೆ ಸಾಕ್ಷಿಯಾಗುತ್ತಿದ್ದೇವೆ. ಆ ಮಾತು ಹೀಗಿದೆ; ಯುಜಿಸಿ, ಅಥವಾ ವಿವಿ ಪ್ರಾಧ್ಯಾಪಕರೆಂದರೆ



ಅದೇನೋ ಅಗತ್ಯವಿಲ್ಲದ ಗತ್ತು, ಗಮ್ಮತ್ತು ತೋರಿಸುವರು ಹೆಚ್ಚುಂಟು. ಅದೇನೋ ಒಂದು ದೊಡ್ಡ ಸಾಧನೆಗೈದಿದ್ದೇವೆ ಎಂದುಕೊಂಡು ಕಿರಿಯರ ಮೇಲೆ ದರ್ಪ ತೋರುವ, ಅತಿಯಾದ ಗಾಂಭೀರ್ಯದಿಂದ ವರ್ತಿಸುವ ಅಥವಾ ಯುವ ಸಂಶೋಧನಾರ್ಥಿಗಳಿಗೆ ಋಣಾತ್ಮಕ ಮಾತುಗಳಿಂದ ಆತ್ಮಸ್ಥೈರ್ಯ ಕುಗ್ಗಿಸುವ ಎಷ್ಟೋ ಪ್ರಾಧ್ಯಾಪಕರನ್ನು ನೋಡಬಹುದಾಗಿದೆ. ಇದಕ್ಕೆ ಭಿನ್ನವೆಂಬಂತೆ ಕಿರಿಯ-ರಿಗೆ ಆತ್ಮವಿಶ್ವಾಸ ತುಂಬುವ ಮೂಲಕ ಇನ್ನಷ್ಟು ಅಧ್ಯಯನ ದಲ್ಲಿ ತೊಡಗಿಸುವಂತಹ ಪ್ರೇರಣಾದಾಯಕದ ಮಾತುಗಳನ್ನಾಡಿ ದೂರದೃಷ್ಟಿಯ ಹರಿಕಾರರಾಗಿ ನಡೆದವರಲ್ಲಿ ಡಾ.ಕೆ. ರವೀಂದ್ರನಾಥರು ಮುಂಚೂಣಿಯಲ್ಲಿ ನಿಂತವರು.

ಇವತ್ತು ವಿಶ್ರಾಂತ ಜೀವನ ಅನುಭವಿಸಬೇಕಿದ್ದ ಶರಣಜೀವಿ ಡಾ. ರವೀಂದ್ರನಾಥರು ವಿಜಯನಗರ ಜಿಲ್ಲೆಯ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಇವತ್ತು ಕನ್ನಡ ಸಾಹಿತ್ಯ ಪರಿವ್ರಾಜಕರಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿರುವುದು ಇತರರಿಗೂ ಮಾದರಿಯಾಗಿದೆ. ಇವರ ಕನ್ನಡದ ಸೇವೆಯನ್ನು ಕಂಡು ಕಳೆದ ಮೂರ್ನಾಲ್ಕು ದಿನಗಳ ಹಿಂದೆ ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆಗೆ (ಅಖಖಐ) ಕನ್ನಡ ಯೋಜನಾ ಅಧಿಕಾರಿಯ ಸ್ಥಾನ ಲಭಿಸಿರುವುದು ಅತ್ಯಂತ ಸಂತೋಷದ ವಿಷಯ. ನನ್ನೊಬ್ಬನಿಗಷ್ಟೆ ಅಲ್ಲ. ಸಾವಿರಾರು ಯುವ ಸಂಶೋಧಕರಿಗೆ, ಮತ್ತವರ ಶಿಷ್ಯವರ್ಗದಲ್ಲೂ ಖುಷಿ ತಂದಿದೆ.

ಇನ್ನು ಹೆಚ್ಚೇನು ಹೇಳುವುದಿಲ್ಲ. ಹಂಪಿಯ ವಿಜಯನಗರದಿಂದ ಮೈಸೂರಿನ ಬೆಟ್ಟದವರೆಗೂ ಅವರ ಕನ್ನಡದ ಸೇವೆಯ ರಥ ಸಾಗಿರುವುದು ಕನ್ನಡ ಭಾಷೆಗೊಂದಿಷ್ಟು ನ್ಯಾಯ ಒದಗಿಸುವ ಸತ್ ಸಂಕಲ್ಪಕ್ಕೆ ಜಯವಾಗಲೆಂದು ಮನದುಂಬಿ ಹಾರೈಸುವೆ.

ಅವರ ಸಾಹಿತ್ಯಿಕ ಸಾಧನೆಗಳ ಹೆಜ್ಜೆ ಗುರುತುಗಳನ್ನು ನಾನಿಲ್ಲಿ ಹೇಳಬಯಸುವುದಿಲ್ಲ. ಅದೆಲ್ಲವೂ ಸಹೃದಯರಿಗೆ ಈಗಾಗಲೇ ತಿಳಿದಿದೆ ಎಂದು ನಾನು ಭಾವಿಸಿದ್ದೇನೆ. ಅದೆಲ್ಲವೂ ಜಾಲತಾಣ ತಮಗೆ



ಒದಗಿಸುತ್ತದೆ. ಹೀಗಾಗಿ ನಾನು ಅವರ ಬರಹಗಳ, ಕ್ಷೇತ್ರಕಾರ್ಯದ ಸಾಧನೆ, ಹಸ್ತ ಪ್ರತಿಗಳ ಸಂಗ್ರಹ, ಸಂಪಾದನೆಗಳಂತಹ ಅಧ್ಯಯನದ ವಿಷಯವಾಗಿ ನಾನು ಹೆಚ್ಚೇನು ಇಲ್ಲಿ ಬರೆಯಲಿಕ್ಕೆ ಬಯಸುವುದಿಲ್ಲ. ಕೊನೆಯದಾಗಿ

ಒಂದು ಮಾತು, ಒಬ್ಬ ನಿಜವಾದ ಸಂಶೋಧಕ, ವಿದ್ವಾಂಸ ಎಂದು ಹೆಚ್ಚು ಪ್ರೀತಿ, ಗೌರವ ಅಭಿಮಾನದಿಂದ ಕರೆಯಲು ಬಯಸುವುದಾದರೆ ಅದು ಪ್ರೊ. ಕೆ. ರವೀಂದ್ರನಾಥರನ್ನು ಮೊದಲಿಗೆ ಕರೆಯುವುದು ಮನಸ್ಸಿಗೆ ತೃಪ್ತಿ, ಸಂತೋಷ ನೀಡುವ ಕ್ಷಣ ಎಂದು ನಾನಂತು ಭಾವಿಸಿದ್ದೇನೆ. ಅವರ ಸಂಪರ್ಕಕ್ಕೆ ಬಂದ ವಿದ್ಯಾರ್ಥಿಗಳು ಈ ಅನುಭವ ಹೊಂದಿರುತ್ತಾರೆ. ಅವರ ಸಾಹಿತ್ಯಿಕ, ಸಾಂಸ್ಕೃತಿ-ಕ, ಸಾಮಾಜಿಕ, ಸಂಪಾದನೆ ಹಾಗೂ ಸಂಶೋಧನಾತ್ಮಕ ಮಹತ್ವದ ಸೇವೆಯನ್ನು ಸರ್ಕಾರಗಳು ಇನ್ನಷ್ಟು ಹೆಚ್ಚು ಗುರುತಿಸಿ ಹೆಚ್ಚಿನ ಸಾಹಿತ್ಯಿಕ ಜವಾಬ್ದಾರಿಗಳನ್ನು ನೀಡಿದರೆ ನಿಜವಾದ ವಿದ್ವತ್ ಪರಂಪರೆಗೆ ದಕ್ಕುವ ಸುವರ್ಣ ಅವಕಾಶ ಅನ್ನದೇ ಮತ್ತೇನನ್ನುವುದು!!.

**ಲೇಖನ:**
**- ಡಾ.ಸಂತೋಷ ಬಿ.ನವಲಗುಂದ.**
**ವಿಜಯಪುರ**





## ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ವಿಜಯಪುರ ಜಿಲ್ಲಾಧ್ಯಕ್ಷ ವಿನೋದ ಖೇಡ ಆಗ್ರಹ

# ಹೊರಗುತ್ತಿಗೆ ನೇಮಕಾತಿಯಲ್ಲಿ ವಿಕಲಚೇತನರಿಗೆ ಉದ್ಯೋಗಾವಕಾಶ ಕಲ್ಪಿಸಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ವಿವಿಧ ಸರ್ಕಾರಿ ಇಲಾಖೆಗಳಲ್ಲಿನ ಹೊರಗುತ್ತಿಗೆ ಆಧಾರಿತ ನೇಮಕಾತಿ ಪ್ರಕ್ರಿಯೆಯಲ್ಲಿ ಕನಿಷ್ಠ ಇಬ್ಬರು ವಿಕಲಚೇತನರಿಗೆ ಉದ್ಯೋಗಾವಕಾಶ ಕಲ್ಪಿಸುವಂತೆ ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರಿಗೆ

ಸೂಕ್ತ ನಿರ್ದೇಶನ ನೀಡಬೇಕು ಎಂದು ವಿಜಯಪುರ ನಗರ ಮತಕ್ಷೇತ್ರದ ಶಾಸಕ ಬಸನಗೌಡ ಆರ್. ಪಾಟೀಲ (ಯತ್ನಾಳ) ಅವರಿಗೆ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ

ಜಿಲ್ಲಾ ಸಮಿತಿ ಪದಾಧಿಕಾರಿಗಳು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ವಿಜಯಪುರ ಜಿಲ್ಲಾಧ್ಯಕ್ಷ ವಿನೋದ ಖೇಡ ಮಾತನಾಡಿ, ವಿಜಯಪುರ ಜಿಲ್ಲೆಯಲ್ಲಿ ಸಾಕಷ್ಟು ವಿಕಲಚೇತನರು ಉನ್ನತ ಶಿಕ್ಷಣ ಪಡೆದಿದ್ದರೂ ಉದ್ಯೋಗ ದೊರೆಯದೆ ನಿರುದ್ಯೋಗಿಗಳಾಗಿ ಉಳಿದಿದ್ದಾರೆ. ವಿಕಲಚೇತನರು ಸಮಾಜದ

ಮುಖ್ಯವಾಹಿನಿಗೆ ಬಂದು ಸ್ವಾವಲಂಬಿ ಜೀವನ ನಡೆಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಲವು ಕಾಯ್ದೆ ಮತ್ತು ಯೋಜನೆಗಳನ್ನು ಜಾರಿಗೊಳಿಸಿವೆ. ಆದರೆ, ಸ್ಥಳೀಯ ಮಟ್ಟದಲ್ಲಿ ಅವುಗಳ ಸಮರ್ಪಕ ಅನುಷ್ಠಾನವಾಗದ ಕಾರಣ ಅಲ್ಲಿ ವಿಕಲಚೇತನರಿಗೆ ಉದ್ಯೋಗಾವಕಾಶಗಳು ದೊರೆಯುತ್ತಿಲ್ಲ ಎಂದರು.

ಈ ಸಂದರ್ಭದಲ್ಲಿ ಎ.ಎ.ವಾಲೀಕಾರ, ಲಾಯಪ್ಪ ಇಂಗಳೆ, ಎ.ಟಿ.ಗುನ್ನಾಪುರ, ಗಣೇಶ ಡೋಣೂರ, ಅನಿಲ ಇಕ್ಕಡಿ, ಮಹಾದೇವಪ್ಪ ತೇಲಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸೈಯದ್‌ಗೆ ಎಕ್ಸೆಲೆನ್ಸ್ ಪ್ರಶಸ್ತಿ ಪ್ರದಾನ

ಕಲಬುರಗಿ: ಖಾಜಾ ಎಜ್ಯುಕೇಶನ್ ಸೊಸೈಟಿಯ ಅಧ್ಯಕ್ಷರಾದ ಆಫೀಜ್ ಜನಾಬ್ ಡಾ. ಸೈಯದ್ ಮುಹಮ್ಮದ್ ಅಲಿ ಅಲ್-ಹುಸೈನಿ ಸಾಹೇಬ್ ಅವರಿಗೆ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವು (ಎಎಂ-ಯು) ಕೊಡಮಾಡುವ ಪ್ರತಿಷ್ಠಿತ 'ಸರ್ ಸೈಯದ್ ಎಕ್ಸಲೆನ್ಸ್ 20226 ಅವಾರ್ಡ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಉತ್ತರ ಪ್ರದೇಶದ ಅಲಿಘನಲ್ಲಿ 2026ರ ಅಕ್ಟೋಬರ್ 17ರಂದು ನಡೆದ ಸಮಾರಂಭದಲ್ಲಿ ಈ



ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಿಕ್ಷಣ, ಸಾಮಾಜಿಕ ಉನ್ನತಿ, ಅಲ್ಪಸಂಖ್ಯಾತರ ಸಬಲೀಕರಣ, ಕೋಮುಸೌಹಾರ್ದತೆ ಹಾಗೂ ಶೈಕ್ಷಣಿಕ ಸಂಸ್ಥೆಗಳ ಮೂಲಕ ಜ್ಞಾನ ಪ್ರಸಾರಕ್ಕೆ ನೀಡಿರುವ ನಿರಂತರ ಕೊಡುಗೆಯನ್ನು ಗುರುತಿಸಿ ಈ ಗೌರವ ನೀಡಲಾಗಿದೆ.

# ಬಸವ ತತ್ವ ಜಗದ ತತ್ವ- ಅಂತರಾಷ್ಟ್ರೀಯ ವಿಚಾರ ಸಂಕಿರಣ ಇಂದು

■ ಉದಯರಶ್ಮಿ ದಿನಪತ್ರಿಕೆ



ಬೆಂಗಳೂರು ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ ಮತ್ತು ಬಸವಣ್ಣನವರ ಅನುಯಾಯಿಗಳ ಒಕ್ಕೂಟ ಬೆಂಗಳೂರು ಇವರ ಸಂಯುಕ್ತ ಸಂಘಟನೆಯಲ್ಲಿ

ಬಸವ ತತ್ವ ಜಗದ ತತ್ವ - ಎಂಬ ವಿಷಯದ ಮೇಲೆ ಅಂತರಾಷ್ಟ್ರೀಯ ವಿಚಾರ ಸಂಕಿರಣವನ್ನು ದಿನಾಂಕ 24 ಅಕ್ಟೋಬರ್ ಬೆಳಿಗ್ಗೆ 9 ಗಂಟೆಗೆ ಬಿ ಕೊಂಡಜ್ಜಿ ಸಭಾಗೃಹ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಪ್ಯಾಲೇಸ್ ರಸ್ತೆ ಬೆಂಗಳೂರನಲ್ಲಿ ಏರ್ಪಡಿಸಲಾಗಿದೆ.

ಈ ವಿಚಾರ ಸಂಕಿರಣದಲ್ಲಿ ನಾಡಿನ ಹೆಸರಾಂತ ಸಂಸ್ಕೃತಿ ಚಿಂತಕರು ಬಸವ ತತ್ವ ಅಧ್ಯಯನಶೀಲರು ಸಾಹಿತಿಗಳು ಸಂಶೋಧಕರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಳ್ಳುವವರು . ಕರ್ನಾಟಕ ಮಹಾರಾಷ್ಟ್ರ ಗೋವಾ ಆಂಧ್ರ ಪ್ರದೇಶ ತೆಲಂಗಾಣ ಮತ್ತು ಇತರೆ ರಾಜ್ಯಗಳಿಂದ ಸುಮಾರು 250 ಕ್ಕೂ ಹೆಚ್ಚು ಜನ ಪ್ರಾಧ್ಯಾಪಕರು ಸಾಹಿತಿಗಳು

ಪಾಲ್ಗೊಳ್ಳುತ್ತಾರೆ. ಬಸವೋತ್ತರ ಕಾಲದ ವಚನ ಚಳುವಳಿಯ ಮುಖಾಮುಖಿ ಚರ್ಚೆ ಮತ್ತು ಇಂದಿನ ದಿನಗಳಲ್ಲಿ ಬಸವ ತಿಳುವಳಿಕೆ ಮತ್ತು ವಚನ ಸಾಹಿತ್ಯದ ಪ್ರಸ್ತುತತೆ ವಚನ ಸಾಹಿತ್ಯದ ಪ್ರಕ್ಷಿಪ್ತತೆ ಪರಿಷ್ಕರಣೆ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಬಗ್ಗೆ ವಿವಿಧ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ.

ಇದೇ ಸಂದರ್ಭದಲ್ಲಿ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ ಇದರ ಕರ್ನಾಟಕ ರಾಜ್ಯ ಘಟಕದ ಉದ್ಘಾಟನೆಯನ್ನು ಮಾಡಲಾಗುವುದು. ಸಮಕಳೆ ಎಂಬ ಅಂತರಾಷ್ಟ್ರೀಯ ವಿಚಾರ ಸಂಕಿರಣದ ಸ್ಮರಣ ಸಂಚಿಕೆಯನ್ನು ಮತ್ತು ಶರಣ ಸಾಹಿತಿ ಡಾ ಶಶಿಕಾಂತ ಪಟ್ಟಣ ಅವರು ರಚಿಸಿದ ಬಸವೋತ್ತರ ಕಾಲದ ಶರಣರು ಎಂಬ ಕೃತಿಯನ್ನು ಲೋಕಾರ್ಪಣೆ ಮಾಡಲಾಗುವುದು.

ಬಸವ ತತ್ವ ಚಿಂತನೆಗಳನ್ನು ವೈಚಾರಿಕ ನೆಲೆಯಲ್ಲಿ ಪ್ರಸಾರ ಮಾಡುವ ಕೈಂಕರ್ಯಕ್ಕೆ ಯುವ ಜನತೆಯನ್ನು ಮಹಿಳೆಯರನ್ನು ಸಿದ್ಧ ಪಡಿಸುವ ಅರಿವಿನ ಆಂದೋಲನವೇ ಈ ಜಾಗತಿಕ ಮಟ್ಟದ ವಿಚಾರ ಸಂಕಿರಣದ ಉದ್ದೇಶವಾಗಿದೆಯೆಂದು

ವಿಚಾರ ಸಂಕಿರಣದ ಸಂಯೋಜಕರಾದ ಡಾ ಶಶಿಕಾಂತ ಪಟ್ಟಣ ಅಧ್ಯಕ್ಷರು

ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ ಪುಣೆ ಮತ್ತು ಶರಣ ಓಂಕಾರ ಚೊಂಡಿ ಅಧ್ಯಕ್ಷರು ಬಸವಣ್ಣನವರ ಅನುಯಾಯಿಗಳ ಒಕ್ಕೂಟ ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಮಧ್ವಾಚಾರ್ಯರ ತತ್ವ ಪ್ರಸಾರಕ್ಕೆ ಸರ್ಕಾರಿ ಆಚರಣೆ ಪೂರಕ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ:ದ್ವೈತ ಸಿದ್ಧಾಂತದ ಮೂಲಕ ಭಾರತೀಯ ತತ್ವಜ್ಞಾನ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ಶ್ರೀಮಂತಗೊಳಿಸಿದ ಮಧ್ವಾಚಾರ್ಯರ ಜಯಂತಿಯನ್ನು ಸರ್ಕಾರಿ ಮಟ್ಟದಲ್ಲಿ ಆಚರಿಸುವ ನಿರ್ಧಾರ ಶ್ಲಾಘನೀಯ ಎಂದು ಉತ್ತರಾಧಿ ಮಠದ ಅರ್ಚಕ ವಿಠ್ಠಲಾಚಾರ್ಯ ಅಭಿಪ್ರಾಯಪಟ್ಟರು.

ತಾಲ್ಲೂಕು ಆಡಳಿತ ಹಾಗೂ ಸಿಂದಗಿ ಬ್ರಾಹ್ಮಣ ಸಮಾಜದ ವತಿಯಿಂದ ಆಯೋಜಿಸಿದ್ದ ಮಧ್ವಾಚಾರ್ಯರ 788ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಧ್ವಾಚಾರ್ಯರು ತಮ್ಮ ತಾತ್ವಿಕ ಚಿಂತನೆ ಹಾಗೂ ಗ್ರಂಥಗಳ ಮೂಲಕ ಭಕ್ತಿ, ಜ್ಞಾನ ಮತ್ತು ಧಾರ್ಮಿಕ ಮೌಲ್ಯಗಳ ಮಹತ್ವವನ್ನು ಸಾರಿದ್ದಾರೆ. ಉಡುಪಿಯಲ್ಲಿ ಶ್ರೀಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಧಾರ್ಮಿಕ ಕ್ಷೇತ್ರದಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ತತ್ವಗಳನ್ನು ಸಮಾಜದ ಎಲ್ಲ ವರ್ಗಗಳಿಗೂ ಪರಿಚಯಿಸುವ ಕಾರ್ಯ ನಡೆಯಬೇಕಿದೆ ಎಂದರು. ಸರ್ಕಾರಿ ಮಟ್ಟದಲ್ಲಿ ಜಯಂತಿ ಆಚರಿಸುವುದರಿಂದ ಮಧ್ವಾಚಾರ್ಯರ ಜೀವನ ಸಾಧನೆಗೆ ಹೆಚ್ಚಿನ ಪ್ರಚಾರ ದೊರೆಯಲಿದೆ. ಮುಂದಿನ ಪೀಳಿಗೆಯಲ್ಲಿ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಅರಿವು ಬೆಳೆಸಲು ಇದು ಸಹಕಾರಿಯಾಗಲಿದೆ. ಸಮಾಜದ ಧಾರ್ಮಿಕ ಭಾವನೆಗಳಿಗೆ ಸ್ಪಂದಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಲಾಗುವುದು ಎಂದು ಹೇಳಿದರು. ಕಾರ್ಯಕ್ರಮದ ಅಂಗವಾಗಿ ರಾಘವೇಂದ್ರ ಸ್ವಾಮಿಗಳ ಮಠದಿಂದ ಮಧ್ವಾಚಾರ್ಯರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಯಿತು. ಭಜನೆ ಹಾಗೂ ಹಾಡುಗಳ ಮೂಲಕ ಸಾಗಿದ ಮೆರವಣಿಗೆಯಲ್ಲಿ ಬ್ರಾಹ್ಮಣ ಸಮಾಜದ ಹಿರಿಯರು, ಯುವಕರು ಮತ್ತು ಮಹಿಳೆಯರು ಭಾಗವಹಿಸಿದ್ದರು.



# ಬಾಲಭಾರತಿ ಶಾಲೆ: ಕಿತ್ತೂರು ಚೆನ್ನಮ್ಮ ಜಯಂತಿ ಆಚರಣೆ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ಪಟ್ಟಣದ ವಿಶ್ವೇಶ್ವರ ಬಾಲಭಾರತಿ ಅನುದಾನಿತ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ ಅವರ ಜಯಂತಿಯನ್ನು ಆಚ-ರಿಸಲಾಯಿತು.ಕಾರ್ಯಕ್ರಮದಲ್ಲಿ ಮಾತನಾಡಿದ ಶಾಲೆಯ ಮುಖ್ಯ ಶಿಕ್ಷಕ ಲಕ್ಷ್ಮೀಪುತ್ರ ಕಿರನಳ್ಳಿ ಅವರು, ಕಿತ್ತೂರು ರಾಣಿ ಚೆನ್ನಮ್ಮ ಅವರು ಬ್ರಿಟಿಷರ ವಿರುದ್ಧ ಹೋರಾಡಿದ ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿಯರಲ್ಲಿ ಒಬ್ಬರು. ತಮ್ಮ ಧೈರ್ಯ, ಸಾಹಸ, ದೇಶಪ್ರೇಮ ಹಾಗೂ ಸ್ವಾಭಿಮಾನದಿಂದ ನಾಡಿನ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ. ಅವರ ಜೀವನ ಮತ್ತು ಹೋರಾಟ ಇಂದಿನ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಿದೆ. ವಿದ್ಯಾರ್ಥಿಗಳು ರಾಣಿ ಚೆನ್ನಮ್ಮ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ದೇಶಪ್ರೇಮ, ಧೈರ್ಯ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಈ ವೇಳೆ ಕಾರ್ಯಕ್ರಮದಲ್ಲಿ ಶಿಕ್ಷಕರಾದ ಲಕ್ಷ್ಮೀಬಾಯಿ ಹಳೇಮನಿ, ಸುವರ್ಣ ಸಾರಂಗಮಠ, ಸೀತಾ ಆರೇಶಂಕರ, ಸರುಬಾಯಿ ಬಂಡಗರ, ಅಂಜಲಿ ಕನ್ನೊಳ್ಳಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

# ದಾನಗಳಲ್ಲಿಯೇ ಶ್ರೇಷ್ಠ ದಾನ.. ಕ್ಷಮಾದಾನ




ವೀಣಾ ಹೇಮಂತ್ ಗೌಡ ಪಾಟೀಲ್.
ಮುಂಡರಗಿ – ಗದಗ

■ ಉದಯರಶ್ಮಿ ದಿನಪತ್ರಿಕೆ

ಒಂದು ಪುಟ್ಟ ಜೋಳದ ಕಾಳನ್ನು ಭೂಮಿಗೆ ಬಿತ್ತಿದರೆ ಅದು ಒಂದು ತೆನೆಯನ್ನು ಬೆಳೆದು ನಮಗೆ ಕೊಡುತ್ತದೆ. ಕೊಡುವುದರಲ್ಲಿ ಅತ್ಯಂತ ಆನಂದವಿದೆ ಎಂಬ ಅರಿವು ನಿಸರ್ಗಕ್ಕೆ ಇರುವಷ್ಟು ನಮಗೆ ಇಲ್ಲ. ಭೂಮಿಯ ಮೇಲಿನ ನೀರು ಆವಿಯಾಗಿ ಮೋಡವನ್ನು ಸೇರಿ ಮತ್ತೆ ಮಳೆಯಾಗಿ ಸುರಿದು ಭೂಮಿಯನ್ನು ಸೇರುತ್ತದೆ. ಹೀಗೆ ಪರಸ್ಪರ ಕೊಡುಕೊಳ್ಳುವಿಕೆಗಳನ್ನು ಭೂಮಿ ಮತ್ತು ಆಕಾಶಗಳಲ್ಲಿ ನಾವು ಕಾಣಬಹುದು. ನಮ್ಮ ಪರಿಸರದಲ್ಲಿ ಗಿಡಮರಗಳು ನೆರಳನ್ನು, ಹೂವು ಹಣ್ಣುಗಳನ್ನು ಕೊಡುತ್ತವೆ. ಪಕ್ಷಿಗಳು ತಾವು ತಿಂದ ಹಣ್ಣಿನ ಬೀಜವನ್ನು ತಮಗರಿವಿಲ್ಲದೆ ಅಲ್ಲಲ್ಲಿ ಎಸೆಯುವ ಮೂಲಕ ಗಿಡಗಳು ಹುಟ್ಟುವಂತೆ ಮಾಡಿ ಪರಿಸರಕ್ಕೆ ವೃಕ್ಷ ಸಂಪತ್ತನ್ನು ಕಾಣಿಕೆಯಾಗಿ ನೀಡುತ್ತವೆ.ಇಡೀ ಪರಿಸರವೇ ನಮಗೆ ಕೊಡುಗೈ ದೊರೆಯಾಗಿ ಕಾಣುತ್ತದೆ.

ಹೀಗೆ ಪ್ರಾಣಿಗಳಿಂದ, ಪಶು ಪಕ್ಷಿಗಳಿಂದ ಪ್ರಭಾವಿತನಾಗಿರುವ ಮನುಷ್ಯ ಕೂಡ ಮನೆಗೆ ಬಂದ ಅತಿಥಿಗಳಿಗೆ ತುತ್ತು ಅನ್ನ ನೀಡಿ ದಾನಿಯಾಗಿದ್ದಾನೆ. ನಮ್ಮ ಶರಣ ಪರಂಪರೆಯಂತೂ ದಾಸೋಹವನ್ನು ಒಂದು ಅದ್ಭುತ ಪ್ರಕ್ರಿಯೆ ಎಂಬಂತೆ ರೂಡಿಸಿಕೊಂಡು ಬಂದಿದ್ದರು. ವ್ಯಕ್ತಿ ತಾನು ದುಡಿದು ಸಂಪಾದಿಸಿದ ಹಣದಲ್ಲಿ ನಾಲ್ಕು ಭಾಗಗಳನ್ನು ಮಾಡಿದರೆ ಒಂದು ಭಾಗವನ್ನು ತನ್ನ ಮನೆಯ ಖರ್ಚು ವೆಚ್ಚಕ್ಕೆ ಮಕ್ಕಳ ವಿದ್ಯಾಭ್ಯಾಸಕ್ಕೆ ಮೂಲಭೂತ ಅವಶ್ಯಕತೆಯಾದ ಮನೆಯ ಇನ್ನುಳಿದ ಆಗುಹೋಗುಗಳಿಗೆ ಬಳಸಿ ಒಂದು ಪಾಲನ್ನು ಕಡ್ಡಾಯವಾಗಿ ದಾನವಾಗಿ ನೀಡಲೇಬೇಕು ಎಂಬ ಸಾಮಾಜಿಕ ತತ್ವವು ನಮ್ಮಲ್ಲಿ ಮನೆ ಮಾಡಲು ಕಾರಣ ಸಮಾಜ ಜೀವಿಗಳಾದ ನಾವು ವಸುದೈವ ಕುಟುಂಬಕಂ ಎಂದು ಭಾವಿಸಿ ವಿಶ್ವ ಕುಟುಂಬಗಳಾಗಿರುವುದು.ನೀರು ಕೇಳಿದವರಿಗೆ ಬೆಲ್ಲವನ್ನು ನೀಡಿ ನೀರು ಕೊಡುತ್ತಾನೆ, ಅಂತೆಯೇ ದಾನ ಎಂಬುದು ಮನುಷ್ಯನ ಬದುಕಿನಲ್ಲಿ ಹಾಸು ಹೊಕ್ಕಾಗಿರಲೇಬೇಕು.

ಈ ದಾನಗಳಲ್ಲಿ ಅನ್ನದಾನ, ವಿದ್ಯಾ ದಾನ, ರಕ್ತದಾನ, ಭೂದಾನ ಗೋದಾನ ಹೀಗೆ ಹತ್ತು ಹಲವು ದಾನಗಳು ಇವೆ. ಆಯಾ ಸಮಯದಲ್ಲಿ ಅವಶ್ಯವಿರುವುದು ದಾನವಾಗಿ ದೊರೆತರೆ ಅದು ಸಾರ್ಥಕ ದಾನವಾಗುತ್ತದೆ.



ಹೊಟ್ಟೆ ತುಂಬಿದ ಮೇಲೆ ಅನ್ನದಾನ ಮಾಡುವ, ವಿದ್ಯೆ ಕಲಿತ ಮೇಲೆ ವಿದ್ಯಾದಾನ ಮಾಡುತ್ತೇವೆ ಎಂದರೆ ಅದು ಅನವಶ್ಯಕ.

ಎಲ್ಲಾ ಸಮಯಗಳಲ್ಲಿಯೂ ಖಡ್ಗಕ್ಕೆ ಖಡ್ಗವೇ ಉತ್ತರವಾಗಬಾರದು. ಅಂತೆಯೇ ಕೋಪಕ್ಕೆ ಶಾಂತತೆಯು ಉತ್ತರವಾದಾಗ ಎದುರಿಗಿರುವ ವ್ಯಕ್ತಿ ಅನಿವಾರ್ಯವಾಗಿಯಾದರೂ ಸಮಾಧಾನ ತಾಳುತ್ತಾನೆ.



ಅವಶ್ಯಕತೆ ಇರುವಾಗ ಅವಶ್ಯಕವಾದುದನ್ನು ದಾನವಾಗಿ ನೀಡಿದರೆ ಅದು ಶ್ರೇಷ್ಠ ಎಂದೆನಿಸಿಕೊಳ್ಳುತ್ತದೆ.

ಆರೋಗ್ಯ ಸರಿ ಇಲ್ಲದೆ ಆಸ್ಪತ್ರೆಯ ಹಾಸಿಗೆಯ ಮೇಲೆ ಇರುವ ವ್ಯಕ್ತಿಗೆ ಅವಶ್ಯಕವಾದ ಗುಂಪಿನ ರಕ್ತವನ್ನು ನೀಡುವ ರಕ್ತದಾನ ಶ್ರೇಷ್ಠ ಎಂದೆನಿಸಿಕೊಳ್ಳುತ್ತದೆ. ಓರ್ವ ವ್ಯಕ್ತಿ ತನ್ನ ದೇಹದಿಂದ ರಕ್ತವನ್ನು ದಾನವಾಗಿ ನೀಡಿ ಮತ್ತೊಬ್ಬರ ಜೀವವನ್ನು ಉಳಿಸಲು ಪ್ರಯತ್ನಿಸುವ ಮೂಲಕ ರಕ್ತದಾನ ಮಾಡಿ ದಾನಗಳಲ್ಲಿಯೇ ಸರ್ವ ಶ್ರೇಷ್ಠ ದಾನ ರಕ್ತದಾನವನ್ನು ಮಾಡಿ, ಜೀವದಾನ ಜೀವನ ದಾನ ಮಾಡುವ ಮೂಲಕ ಶ್ರೇಷ್ಠ ದಾನಿ ಎಂದೆನಿಸಿಕೊಳ್ಳುತ್ತಾನೆ.

ನಮ್ಮ ಭಾರತೀಯ ಸಂಪ್ರದಾಯ, ಸಂಸ್ಕೃತಿಗಳಲ್ಲಿ ಅವಶ್ಯವಿದ್ದಾಗ ಭೂಮಿಯನ್ನು ಶಾಸ್ತ್ರೋಕ್ತವಾಗಿ ಪೂಜಿಸಿ ದಾನವನ್ನು ನೀಡುವುದು ಭೂದಾನ ಎಂದೆನಿಸಿಕೊಳ್ಳುತ್ತದೆ. ಹಾಗೆ ದಾನವಾಗಿ ನೀಡಿದ ಭೂಮಿಯಲ್ಲಿ ಮಠಮಾನ್ಯಗಳು ಶಾಲೆ ಕಾಲೇಜುಗಳು ವಿದ್ಯಾಮಂದಿರಗಳು ನಿರ್ಮಿಸಲ್ಪಟ್ಟು ಕಾರ್ಯನಿರ್ವಹಿಸುವಾಗ ಅದು ಕೂಡ ಶ್ರೇಷ್ಠ ದಾನವಾಗಿ ಪರಿಗಣಿಸಲ್ಪಡುತ್ತದೆ.

ಪೂಜೆ ಪುನಸ್ಕಾರಗಳ ಸಂದರ್ಭದಲ್ಲಿ ಮನೆಯಲ್ಲಿರುವ ಆಕಳನ್ನು ಗೋದಾನವಾಗಿ ಕೊಡುವ ಮೂಲಕ, ಹಾಗೆ ದಾನ ಪಡೆದವರಿಗೆ ಒಂದು ಅಗೋಚರ ಉದ್ಯೋಗವನ್ನು ನೀಡುತ್ತಾರೆ. ದಾನ ಪಡೆದವರು ಆಕಳನ್ನು ಸಾಕುವ ಮೂಲಕ ಅದರ ಹಾಲನ್ನು ಕರೆದು ಮಾರುತ್ತಾರೆ ಇಲ್ಲವೇ ಮನೆಗೆ ಬಳಸುತ್ತಾರೆ. ಆಕಳಿನ ಸಗಣಿಯನ್ನು ಬೆರಣಿ ತಟ್ಟಿ



ಒಣಗಿಸಿ ಮಾರುವ ಮೂಲಕ ಒಂದು ಉದ್ಯೋಗವನ್ನು ಹೊಂದುತ್ತಾರೆ ಹೀಗೆ ಗೋದಾನವೂ ಕೂಡ ಶ್ರೇಷ್ಠ ದಾನವೆಂದು ಕರೆಯಲ್ಪಡುತ್ತದೆ.

ಆದರೆ ಇವೆಲ್ಲಕ್ಕಿಂತಲೂ ಮಿಗಿಲಾದ ಎಲ್ಲಾ ಸಮಯದಲ್ಲಿಯೂ ಅತ್ಯವಶ್ಯಕವಾದ ಒಂದು ದಾನ ಎಂದರೆ ಅದು ಕ್ಷಮಾದಾನ. ಯಾವುದೋ ಒಂದು ಹೋಟೆಲಿನಲ್ಲಿ ಕುಳಿತಿರುವಾಗ ಅಲ್ಲಿನ ವೇಟರ್ ನೀರನ್ನು ಇಡುವಾಗ ಕೈ ತಾಕಿ ತುಸು ನೀರನ್ನು ಚೆಲ್ಲಬಹುದು. ಆಗ ನಾವು ಅದೆಷ್ಟು ಜೋರಾಗಿ ಕೂಗಾಡುತ್ತೇವೆ ಎಂದರೆ ಆತ ಬೇಕೆಂದೇ ಈ ರೀತಿ ಮಾಡಿದ್ದಾನೆ ಎಂಬಂತೆ ಹೀನಮಾನವಾಗಿ ಗದರುತ್ತೇವೆ. ಮತ್ತೆ ಕೆಲವೊಮ್ಮೆ ಗಾಡಿಯಲ್ಲಿ ಹೋಗುವಾಗ ಬೈಕಿನಲ್ಲಿ ಹೋಗುವ ವ್ಯಕ್ತಿ ರಾಂಗ್ ಸೈಡ್ ನಲ್ಲಿ ಬಂದಾಗ ಕಾರಿನ ಗಾಜನ್ನು ಏರಿಸಿಕೊಂಡು ರಕ್ತ ಸುಟ್ಟವರಂತೆ ನಾವು ಒಂದೇ ಸಮ ಆತನನ್ನು ಬೈಯುತ್ತೇವೆ. ಆತನ ಮತ್ತು ನಮ್ಮ ದಾರಿಗಳು ದೂರವಾದರೂ ಆತನಿಗೆ ನಮ್ಮ ಸಿಟ್ಟು ಗೊತ್ತಾಗುವುದಿಲ್ಲ ಎಂದು ಗೊತ್ತಿದ್ದರೂ ಕೂಡ

ನಮ್ಮ ಸಿಟ್ಟು ಇಳಿಯುವುದಿಲ್ಲ ಮತ್ತು ಆತನ ಮೇಲೆ ನಾವು ಬೈಗುಳಗಳ ಸುರಿಮಳೆ ಸುರಿಸುತ್ತಲೇ ಇರುತ್ತೇವೆ.

ನಮ್ಮ ಹಿರಿಯರು ಮಾಡಿದ ತಪ್ಪುಗಳನ್ನು ಎತ್ತಿ ಆಡುವ, ನಮ್ಮ ಮಕ್ಕಳು ಮಾಡುವ ಪ್ರತಿ ಸಣ್ಣಪುಟ್ಟ ತಪ್ಪುಗಳಿಗೆ ಕೂಗಾಡುವ ನಾವು, ಈ ಎಲ್ಲ ವಿಷಯಗಳನ್ನು ಎತ್ತಿ ಆಡುವ ಬದಲು ಅವರ ತಪ್ಪುಗಳನ್ನು ಕ್ಷಮಿಸಿದರೆ ನಮ್ಮ ಮನೆ, ಮನ ಮತ್ತು ಮನೆತನಗಳು ಪ್ರಶಾಂತವಾಗಿ ಇರುತ್ತವೆ. ಆದ್ದರಿಂದ ದಾನಗಳಲ್ಲಿಯೇ ಅತ್ಯಂತ ಶ್ರೇಷ್ಠವಾದ ದಾನ ಕ್ಷಮಾದಾನ.

ನಮ್ಮ ಎದುರಿಗಿರುವ ವ್ಯಕ್ತಿಯನ್ನು ನಾವು ಕ್ಷಮಿಸಿದಾಗ ಆತನಿಗೆ ಲಾಭವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ ಆದರೆ ಆತನಿಗೆ ಕ್ಷಮಿಸುವ ಮೂಲಕ ನಾವು ನಮಗೆ ಅತಿ ದೊಡ್ಡ ಉಪಕಾರವನ್ನು ಮಾಡಿಕೊಳ್ಳುತ್ತೇವೆ. ವ್ಯಕ್ತಿಯನ್ನು ಕ್ಷಮಿಸುವ ಮೂಲಕ ನಮ್ಮ ಏರುತ್ತಿರುವ ಸಿಟ್ಟನ್ನು ತಹಬಂದಿಗೆ ತರುತ್ತೇವೆ ಇದರಿಂದ ನಮ್ಮ ಏರು ರಕ್ತದ ಒತ್ತಡವು ಇಳಿಮುಖವಾಗಿ ಒತ್ತಡದ ಸೂಚ್ಯಂಕವು ಕೆಳಮಟ್ಟಕ್ಕೆ ಇಳಿಯುತ್ತದೆ. ನಮ್ಮ ಥೈರಾಯಿಡ್ ಮಟ್ಟವು ಕೂಡ ಇಳಿಯುತ್ತದೆ ನಮ್ಮ ಮನಸ್ಸು ಪ್ರಶಾಂತತೆಯನ್ನು ಹೊಂದುತ್ತದೆ. ಇವೆಲ್ಲವುಗಳ ಪರಿಣಾಮವಾಗಿ ನಮ್ಮ ಮಧುಮೇಹವು ಕೂಡ ಸಾಮಾನ್ಯ ಸ್ಥಿತಿಗೆ ಇಳಿಯುತ್ತದೆ. ಇದರ ತಾತ್ಪರ್ಯವಿಷ್ಟೇ ಕ್ಷಮಾದಾನವನ್ನು ನೀಡುವ ಮೂಲಕ ನಮ್ಮ ಮನೋದೈಹಿಕ ಆರೋಗ್ಯವು ಸುಸ್ಥಿತಿಯಲ್ಲಿ



ಇರುತ್ತದೆ. ಮಾನಸಿಕ ಸಂತುಲನ ನಮ್ಮದಾಗುತ್ತದೆ. ಪರಿಸ್ಥಿತಿಯನ್ನು ನಾವು ಸೂಕ್ತವಾಗಿ ಅವಲೋಕಿಸುವ ಮೂಲಕ ನಮ್ಮ ಮನಸ್ಸಿನ ವಿಶಾಲತೆಯನ್ನು ಹೆಚ್ಚಿಸಿಕೊಳ್ಳುತ್ತೇವೆ.

ಇಬ್ಬರು ವ್ಯಕ್ತಿಗಳ ನಡುವಿನ ವಾಗ್ವಾದದಲ್ಲಿ ಒಬ್ಬರು ಕೋಪದಿಂದ ವರ್ತಿಸಿದಾಗ ಅವರ ಮುಂದೆ ಇರುವವರು ಶಾಂತವಾದ ಪ್ರತಿಕ್ರಿಯೆಯ ಮೂಲಕ ಎದುರಿಗಿರುವ ವ್ಯಕ್ತಿಯ ಕೋಪವನ್ನು ತಗ್ಗಿಸಬಹುದು. ಎಲ್ಲಾ ಸಮಯಗಳಲ್ಲಿಯೂ ಖಡ್ಗಕ್ಕೆ ಖಡ್ಗವೇ ಉತ್ತರವಾಗಬಾರದು ಅಂತೆಯೇ ಕೋಪಕ್ಕೆ ಶಾಂತತೆಯು ಉತ್ತರವಾದಾಗ ಎದುರಿಗಿರುವ ವ್ಯಕ್ತಿ ಅನಿವಾರ್ಯವಾಗಿಯಾದರೂ ಸಮಾಧಾನ ತಾಳುತ್ತಾನೆ. ಪ್ರಸ್ತುತ ದಿನಮಾನಗಳಲ್ಲಿ ಮನೆ ಮನೆಗಳಲ್ಲಿ ಶಾಂತತೆಯ ಬೀಡು ಬಿಡಲು, ಬಂಧುತ್ವವನ್ನು ಉಳಿಸಿಕೊಳ್ಳಲು ಅತ್ಯವಶ್ಯಕವಾಗಿ ಬೇಕಾಗಿರುವುದು ಕ್ಷಮಾದಾನ. ಕ್ಷಮಾದಾನವನ್ನು ಪ್ರಯತ್ನಪೂರ್ವಕವಾಗಿ ನಾವು ಸಾಧಿಸಿದಾಗ ಅದು ನಮ್ಮಮನೋ ದೈಹಿಕ ಅಭಿವೃದ್ಧಿಗೆ ಸಾಮಾಜಿಕ ಪ್ರಗತಿಗೆ ಕಾರಣವಾಗುತ್ತದೆ.



## “ನಿಜದರಿವು” ಹೈಕು ಸಂಕಲನ ಲೋಕಾರ್ಪಣೆ

ಕಲಬುರಗಿ:ಇಲ್ಲಿನ ಬುದ್ಧಂಕುರ ಪ್ರಕಾಶನ ಸಂಸ್ಥೆ ವತಿಯಿಂದ ಕವಿ ಸಂತೋಷಕುಮಾರ ಕರಹರಿ ಅವರ “ನಿಜದರಿವು” ಹೈಕು ಸಂಕಲನ ಲೋಕಾರ್ಪಣೆ, ವಾರ್ಷಿಕ ಪ್ರಶಸ್ತಿ ಪ್ರದಾನ ಹಾಗೂ ಸನ್ಮಾನ ಸಮಾರಂಭವನ್ನು ಅ.18 ರಂದು ನಗರದ ಸೇಡಂ ರಸ್ತೆಯ ಹೊಸ ಆರ್‌ಟಿಓ ಕಚೇರಿ ಹತ್ತಿರದ ರಂಗಾಯಣ ಸಭಾಂಗಣದಲ್ಲಿ ನಡೆಯಿತು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ನಾಡೋಜ ಡಾ.ಕುಂ.ವೀರಭದ್ರಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಿ ಪುಸ್ತಕ ಬಿಡುಗಡೆ ಮಾಡಿದರು. ಬೀದರ್‌ನ ಹಿರಿಯ ಸಾಹಿತಿ ಶಂಭುಲಿಂಗ ವಾಲ್ದೊಡ್ಡಿ ಅವರು ಅಧ್ಯಕ್ಷತೆ ವಹಿಸಿದ್ದರು.

ಹಾವೇರಿಯ ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಟಿ.ಎಂ.ಭಾಸ್ಕರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಅಫಲಪುರದ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹ ಪ್ರಾಧ್ಯಾಪಕ ಡಾ.ಶಿವಶರಣಪ್ಪ ಮೋತಕಪಳ್ಳಿ ಮುಖ್ಯ ಅತಿಥಿಗಳಾಗಿ, ಚಿಂಚೋಳಿ ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ ದೇಶಪಾಂಡೆ ಅತಿಥಿಗಳಾಗಿ ಆಗಮಿಸಿದ್ದರು.

ವಿಮರ್ಶಕ ಡಾ.ಗವಿಸಿದ್ದಪ್ಪ ಪಾಟೀಲ ಪುಸ್ತಕ ಪರಿಚಯ ಮಾಡಿದರು. ಕವಿ ಸಂತೋಷಕುಮಾರ ಎಸ್.ಕರಹರಿ ಅವರು ಉಪಸ್ಥಿತರಿದ್ದರು. ಉತ್ತಮ ದೊಡ್ಡಮನಿ ಚಿಂಚೋಳಿ ಪ್ರಶಸ್ತಿ ಪುರಸ್ಕೃತರ ಪರಿಚಯ ಮಾಡಿದರು. ಡಾ.ರಾಜಕುಮಾರ ಮಾಳಗೆ ಸ್ವಾಗತಿಸಿದರು. ಮುನ್ನೆಮ್ಮ ಮೇತ್ರೆ ಕಾರ್ಯಕ್ರಮ ನಿರೂಪಿಸಿದರು. ಸಿರಿಗನ್ನಡ ವೇದಿಕೆ ಕಾರ್ಯದರ್ಶಿ ಡಾ.ಸಿದ್ದಪ್ಪ ಹೊಸಮನಿ ವಂದಿಸಿದರು. ಸಾಹಿತಿಗಳು, ಸಾಹಿತ್ಯಾಸಕ್ತರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರಶಸ್ತಿ ಪ್ರದಾನ ಹಿರಿಯ ಸಾಹಿತಿ ವಿ.ಆರ್. ಚಾಂಬಾಳ್, ಡಾ.ಜಯದೇವಿ ಗಾಯಕವಾಡ ಅವರಿಗೆ ಬುದ್ಧಂಕುರ ವಾರ್ಷಿಕ ಪ್ರಶಸ್ತಿ ಮತ್ತು ಗಾಯಕ ಸಿದ್ಧಾರ್ಥ ಚಿಮ್ಮಾಇದಲಾಯಿ, ಕು.ಪೃಥ್ವಿ ದೇವಿಂದ್ರಪ್ಪ ಕಪನೂರ ಅವರಿಗೆ ಸನ್ಮತಿ ಪ್ರೇರಣಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ವಿಜಯಪುರ ಜಿಲ್ಲೆಯನ್ನು 371 (ಜೆ) ಕಲಂಗೆ ಸೇರಿಸಲು ವಿದ್ಯಾರ್ಥಿಗಳು ಬೆಣಬಲ ನೀಡಲಿ:ಸ್ನೇಹಾ ದಾಸ್ಮಾ

ಸಿಂದಗಿ: ಡಾ. ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ದಾಖಲಾಗಿರುವ ವಿಜಯಪುರ ಜಿಲ್ಲೆಯನ್ನು ಸಂವಿಧಾನದ 98 ತಿದ್ದುಪಡಿಯಲ್ಲಿ ಜಿಲ್ಲೆಯ ತಾಲೂಕುಗಳು ಅತೀ ಹಿಂದೂಳಿದ ಪ್ರದೇಶಗಳೆಂದು ಪರಿಗಣಿಸಿಲಾಗಿದ್ದು 371 (ಜೆ) ಸೇರುವ ಎಲ್ಲ ಅರ್ಹತೆಗಳಿವೆ ರಾಜ್ಯದ ಎಲ್ಲ ಬಗೆಗಳಲ್ಲಿ ಅವಲೋಕನ ಮಾಡಿದರು ಕೂಡಾ ಸತತ ಬರಗಾಲ ಪಿಡೀತ ಪ್ರದೇಶವೆಂದು ಹಣೆ ಪಟ್ಟಿ ಕಟ್ಟಿಕೊಂಡು ಬಂದಿದ್ದೇವೆ ಆ ಕಾರಣ ನಗರದಲ್ಲಿ 19 ದಿನಗಳಿಂದ ನಡೆದ 371 ಜೆ ಹೋರಾಟಕ್ಕೆ ವಿದ್ಯಾರ್ಥಿಗಳು ಸಂಪೂರ್ಣವಾಗಿ ಬೆಂಬಲ ನೀಡಿಬೇಕು ಎಂದು ಸರಕಾರಿ ಪ್ರಥಮ ದರ್ಜೆ ಮಾಹಾವಿದ್ಯಾಲಯದ ವಿದ್ಯಾರ್ಥಿನಿ ಕುಮಾರಿ ಸ್ನೇಹಾ ದಸ್ಮಾ ಹೇಳಿದರು"

ನಗರದ ಶ್ರೀ ಬಸವೇಶ್ವರ ವೃತ್ತದ ಬಳಿ ರೇ.ಚ.ರೆವಡಿಗಾರ ಪ್ರತಿಷ್ಠಾನ ನೇತೃತ್ವದಲ್ಲಿ 371 ಜೆ ಹೋರಾಟ ಸಮಿತಿ ಕಳೆದ 19 ದಿನಗಳಿಂದ ನಿರಂತರವಾಗಿ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಬೇಟಿ ನೀಡಿ ಬೆಂಬಲ ಸೂಚಿಸಿ ಮಾತನಾಡಿ, ಜಿಲ್ಲೆಯ ಎಲ್ಲ ಶಾಸಕರೊಳಗೊಂಡು ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ಮನವಿ ಮಾಡಿಕೊಂಡು ಚಳಿಗಾಲ ಅಧಿವೇಶನದಲ್ಲಿ ಈ ವಿಷಯದ ಕುರಿತು ಚರ್ಚಿಸಬೇಕು ಎಂದರು.



ಸಿಂದಗಿಯಲ್ಲಿ 19 ದಿನಗಳಿಂದ ನಡೆದ 371 ಜೆ ಹೋರಾಟಕ್ಕೆ ಸಿಂದಗಿಯ ಗಣ್ಯರು ಹಾಗೂ ವಿದ್ಯಾರ್ಥಿಗಳಿಂದ ಬೆಂಬಲ ನೀಡಿದರು"

ಕುಮಾರಿ ದಾನೇಶ್ವರಿ ತಂಬಾಕೆ ಮಾತನಾಡಿ ಸಿಂದಗಿ, ಇಂಡಿ, ಮುದ್ದೇಬಿಹಾಳ, ಬಸವನಬಾಗೇವಾಡಿ ತಾಲೂಕುಗಳಲ್ಲಿ ಅನೇಕರು ನಿಜಾಮರ ಕಾಲದಲ್ಲಿ ತಮ್ಮ ಪ್ರಾಣ ತ್ಯಾಗ ಮಾಡಿದ ಹಿನ್ನಲೆಯಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಅತೀ ಹಿಂದೂಳಿದ ನಮ್ಮ ಜಿಲ್ಲೆಯಾಗಿದೆ ಕಾರಣ ಡಾ. ನಂಜುಂಡಪ್ಪ ವರದಿ 371 ಜೆ ಅನ್ವಯವಾಗುವ ಎಲ್ಲ ಅರ್ಹತೆಗಳು ನಮ್ಮಲ್ಲಿವೆ ಆದರೆ ಅಂದು ಕೇಳುವವರ ಕೊರತೆಯಿಂದ ಜಾರಿಯಾಗಲ್ಲಿಲ್ಲ. ಸದ್ಯ ಹೊರಾಟದ ಕಿಚ್ಚು ಪ್ರಾರಂಭವಾಗಿದೆ ಅದು ಜಾರಿಯಾಗುವರೆಗೂ ನಿಲ್ಲುವುದಿಲ್ಲ. ಈ ಹೋರಾಟಕ್ಕೆ ವಿದ್ಯಾರ್ಥಿಗಳು ಸಂಪೂರ್ಣ ಎಲ್ಲ ರೀತಿಯ ಬೆಂಬಲವಿದೆ ಎಂದು ಅಭಿಮತ ವ್ಯಕ್ತಪಡಿಸಿದರು.

ಜಿ.ಜಿ.ವಾರದ ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಯ ಸಂಗನಬಸವ ಬಿರಾದಾರ ಮಾತನಾಡಿ, ಹೈದ್ರಾಬಾದ ವಿಮೋಚನೆಗಾಗಿ ಸಿಂದಗಿಯವರೆ ಸ್ವಾಮಿ ರಮಾನಂದ ತೀರ್ಥರ ಕೊಡುಗೆಯಿದೆ ಅಲ್ಲದೆ ರಜಾಕರ ಹಾವಳಿಯಲ್ಲಿ ಸರ್ದಾರ ಶರಣಗೌಡ ಇನಾಮದಾರ ಕಕ್ಕಳಮೇಲಿ ಸೇರಿದಂತೆ ಚನ್ನಬಸಪ್ಪ ಕುಳಗೇರಿ, ದೇವೇಂದ್ರಪ್ಪ ಮಾಸ್ತರ ನಿಜಾಮರ ವಿರುದ್ಧ ಹೋರಾಡಿದ್ದ ದಾಖಲೆಗಳಿವೆ ಅದರ ಆಧಾರದ ಮೇಲೆ ಡಾ. ನಂಜುಂಡಪ್ಪ ವರದಿಯಲ್ಲಿ ಈ ಜಿಲ್ಲೆಯ ನಾಲ್ಕು ತಾಲೂಕುಗಳು ನಮೂದಾಗಿವ್ವಾ ಕಾರಣಕ್ಕೆ ವರದಿಯಿಂದ ಕೈಬಿಟ್ಟ ಹಿಂದೂಳಿದ ತಾಲೂಕುಗಳನ್ನು ಮರು ಪರಿಶೀಲಿಸಿ ಈ ವರದಿಯಲ್ಲಿ ಅಳವಡಿಸಿ ಸಹಕಾರ ನೀಡಬೇಕು ಎಂದು ಒತ್ತಾಯಿಸಿದರು.

ಕೇರೂಟಗಿಯ ಶಿಕ್ಷಕ ಶ್ರೀಶೈಲಗೌಡ ಪಾಟೀಲ ಮಾತನಾಡಿ, ಪ್ರತಿಯೊಂದು ಹೊಬಳಿ ಮಟ್ಟದವರೆಗೂ ಜನಾಂದೋಲನ ನಡೆಯಬೇಕು. ಅಂದಾಗ ಮಾತ್ರ ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ವಿಜಯಪುರ ಜಿಲ್ಲೆಯನ್ನು 371 (ಜೆ) ಕಲಂಗೆ ಸೇರಿಸಲು ಕಣ್ಣತೆರೆದು ನೋಡಬಹುದು ಎಂದರು. ಈ ಸಂದರ್ಭದಲ್ಲಿ ಬಿ.ಎಂ.ಬಿರಾದಾರ, ಮಹಾಂತೇಶ ಪಟ್ಟಣಶೆಟ್ಟಿ, ಸೋಮನಗೌಡ ಬಿರಾದಾರ, ಮಲ್ಲನಗೌಡ ಬ್ಯಾಕೋಡ, ಗೋಲ್ಲಾಳಪ್ಪಗೌಡ ಮಾಗಣಗೇರಿ, ವಿಶ್ವನಾಥ ಬಮ್ಮಣ್ಣಿ, ಕಾಳಣ್ಣ ಬಗಲಿ, ಬಸವರಾಜ ಐರೋಡಗಿ, ಪ್ರಕಾಶ ಗುಣಾರಿ, ಗುರುಗೌಡ ಬಿರಾದಾರ, ಸಿದ್ದು ಜಗತಿ, ತಾಳಿಕೋಟಿ ಸರ್, ಚೇತನಗೌಡ ಪಾಟೀಲ, ಹೋರಾಟದ ಸಮಿತಿಯ ಶಂಕರ ಮಲ್ಲೇದ, ಶೈಲಜಾ ಸ್ಥಾವರಮಠ, ಎಂ.ಎಂ.ಹಂಗರಗಿ, ಪಂಡಿತ ಯಂಪೂರೆ, ಸಾಯಬಣ್ಣ ದೇವರಮನಿ, ಸಂಗಣ್ಣ ಬ್ಯಾಕೋಡ ಉಪಸ್ಥಿತರಿದ್ದರು

## ಕಲಬುರಗಿ–ಬಳ್ಳಾರಿ ಸೈಕಲ್ ಜಾಗೃತಿ ಯಾತ್ರೆಗೆ ಜೇವರ್ಗಿಯಲ್ಲಿ ಅದ್ದೂರಿ ಸ್ವಾಗತ

ಜೇವರ್ಗಿ : ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿ ಹಾಗೂ ಸಂವಿಧಾನದ 371ಜೆ ಕಲಂನ ಸಮರ್ಪಕ ಅನುಷ್ಠಾನದ ಕುರಿತು ಜನಜಾಗೃತಿ ಮೂಡಿಸುವ ಉದ್ದೇಶದಿಂದ ಕಲ್ಯಾಣ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಕಲಬುರಗಿ–ಬಳ್ಳಾರಿ ಸೈಕಲ್ ಜಾಗೃತಿ ಯಾತ್ರೆಗೆ ಜೇವರ್ಗಿ ಪಟ್ಟಣದಲ್ಲಿ ಅದ್ದೂರಿ ಸ್ವಾಗತ ದೊರೆಯಿತು. ಸಂಘದ ರಾಜ್ಯಾಧ್ಯಕ್ಷ ಹಾಗೂ ಸಂಪಾದಕ ಮಲ್ಲಿಕಾರ್ಜುನ ಪಗಡೆ ಅವರ ಸಾರಥ್ಯದಲ್ಲಿ ಸಾಗುತ್ತಿರುವ ಯಾತ್ರೆಯು ಜೇವರ್ಗಿ ಪಟ್ಟಣದ ಬಸವೇಶ್ವರ ವೃತ್ತಕ್ಕೆ ಆಗಮಿಸಿದ ಸಂದರ್ಭದಲ್ಲಿ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು, ರೈತ ಮುಖಂಡರು ಹಾಗೂ ಸಾರ್ವಜನಿಕರು ಹೂಮಳೆಗೈದು ಆತ್ಮೀಯವಾಗಿ ಬರಮಾಡಿಕೊಂಡರು.

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ, ಯುವಜನರಿಗೆ ಉದ್ಯೋಗ ಅವಕಾಶಗಳು, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳ ಸುಧಾರಣೆ ಹಾಗೂ 371ಜೆ ಕಲಂನ ಪರಿಣಾಮಕಾರಿ ಅನುಷ್ಠಾನದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಈ ಯಾತ್ರೆಯ ಪ್ರಮುಖ ಉದ್ದೇಶವಾಗಿದೆ. ಈ ಭಾಗದ ಹಕ್ಕುಗಳು ಮತ್ತು ಅಭಿವೃದ್ಧಿಯ ಪ್ರಶ್ನೆಗಳನ್ನು



ಸರ್ಕಾರದ ಗಮನಕ್ಕೆ ತರುವ ನಿಟ್ಟಿನಲ್ಲಿ ಯಾತ್ರೆ ಮಹತ್ವದ ಹೆಜ್ಜೆಯಾಗಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟರು.

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಪತ್ರಕರ್ತರು ಕೈಗೊಂಡಿರುವ ಈ ಜಾಗೃತಿ ಅಭಿಯಾನಕ್ಕೆ ವಿವಿಧ ಸಂಘಟನೆಗಳ ಮುಖಂಡರು ಮತ್ತು ಸಾರ್ವಜನಿಕರು ಬೆಂಬಲ ವ್ಯಕ್ತಪಡಿಸಿದ್ದು, ಈ ಭಾಗದ ಸಮಗ್ರ ಪ್ರಗತಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಧ್ವನಿ ಎತ್ತಬೇಕೆಂಬ ಆಶಯ ವ್ಯಕ್ತವಾಯಿತು. ಈ ಸಂದರ್ಭದಲ್ಲಿ ಸಂಪಾದಕ ಚಂದ್ರಶೇಖರ ಗೌಡ ಮಾಲಿಪಾಟೀಲ್, ರೈತ ಮುಖಂಡ ಪ್ರಶಾಂತ ಗೌಡ ಮಾಲಿಪಾಟೀಲ್, ಶಾಂತಲಿಂಗ ಪಾಟೀಲ್ ಕೋಳಕೂರು, ಶಿವಸೇನೆ ಪಕ್ಷದ ತಾಲೂಕು ಅಧ್ಯಕ್ಷ ಮಲ್ಕಣ್ಣ ಹಿರೇಪೂಜಾರಿ, ಕಸಾಪ ಅಧ್ಯಕ್ಷ ಎಸ್.ಕೆ. ಬಿರಾದಾರ, ಜಯ ಕರ್ನಾಟಕ ಸಂಘಟನೆಯ ತಾಲೂಕ ಅಧ್ಯಕ್ಷ ಭೀಮಾಶಂಕರ ಬಿಲ್ಲಾಡ, ಪರಮೇಶ ನಾಯಕ, ರವಿಕುಮಾರ ತಳವಾರ, ರಾಜಶೇಖರ ಮಾತೋಳ್ಳಿ, ಚೆನ್ನಪ್ಪ ಇಂಚಿಗೇರಿ, ಉಮೇಶ ಅಚಲೇರಿ, ರವಿ ಬಡಿಗೇರ, ವಿಠಲ ಪೂಜಾರಿ, ಮಹೇಶ, ಮಂಜುನಾಥ ಹಾಗೂ ಭೀಮಾಶಂಕರ ಈಜೇರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಅಡ್ವೋಕೇಟ್ಸ್ ಕಾಲೊನಿಯ ದಾನಮ್ಮ ದೇವಿಯ ಪುರಾಣಮಂಗಲ



ಕಲಬುರಗಿ : ನಗರದ ಅಡ್ವೋಕೇಟ್ಸ್ ಕಾಲೊನಿಯ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಆವರಣದಲ್ಲಿ ಕಳೆದ ಒಂಬತ್ತು ದಿನಗಳಿಂದ ನಡೆಯುತ್ತಿದ್ದ ಗುಡ್ಡಾಪುರದ ದಾನಮ್ಮ ದೇವಿಯ ಜೀವನ ದರ್ಶನ ಕುರಿತ ಪುರಾಣ ಪ್ರವಚನವು ಮಂಗಳಗೊಂಡಿತು. ನರೋಣಾ ಹಾಗೂ ಗೋಳಾದ ಹೊಸಮಠದ ಪೂಜ್ಯ ಚನ್ನಮಲ್ಲ ಸ್ವಾಮಿಗಳು ಪ್ರವಚನ ನೀಡಿ ಭಕ್ತಸಮೂಹವನ್ನು ಆಶೀರ್ವದಿಸಿದರು. ಯೋಗಿಗಳು ಹಾಗೂ ಮಹಾತ್ಮರು ತಿಳಿಸಿರುವಂತೆ ಈ ಭೂಮಿಯ ಮೇಲಿನ ದೇಹವು ನಶ್ವರವಾಗಿದ್ದು, ಮರಣ ಬಂದರೆ ಯಾರನ್ನೂ ಬಿಡುವುದಿಲ್ಲ ಎಂದರು. ಆನೆ, ಕುದುರೆ, ಬಂಡಿ, ಭಂಡಾರ ಎಷ್ಟೇ ಇದ್ದರೂ ಮನುಷ್ಯ ಉಣ್ಣುವುದು ಕೇವಲ ಪಡಿಯಕ್ಕಿ ಹಾಗೂ ಮಲಗುವುದು ಅರ್ಧಮಂಚದ ಮೇಲೆ ಎಂಬುದನ್ನು ಅರಿತು ಅಹಂಕಾರವಿಲ್ಲದೆ ಬದುಕಬೇಕು ಎಂದು ನುಡಿದರು.

ಸುಂದರ ಜೀವನಕ್ಕಾಗಿ ಕೆಲವು ಪ್ರಮುಖ ಸೂತ್ರಗಳನ್ನು ವಿವರಿಸಿದ ಅವರು, ಬಾಳಿನಲ್ಲಿ ಏಕತೆ, ಜೀವನದಲ್ಲಿ ಶಾಂತತೆ, ಬದುಕಿನಲ್ಲಿ ಮಮತೆ ಹಾಗೂ ಮಾತಿನಲ್ಲಿ ಮಧುರತೆ ಇರಬೇಕು ಎಂದು ತಿಳಿಸಿದರು.ಈ ಭಕ್ತಿಪೂರ್ವಕ ಕಾರ್ಯಕ್ರಮದಲ್ಲಿ ಗವಾಯಿಗಳಾದ ಚೇತನ ಹಿರೇಮಠ ಅವರು ಅಡ್ವೋಕೇಟ್ ಕಾಲನಿಯ ಶ್ರೀ ಮಹಾಲಕ್ಷ್ಮೀ ದೇವಿಯ ಕುರಿತ ಗೀತೆಯನ್ನು ರಚಿಸಿ, ಸಂಗೀತ ಸಂಯೋಜಿಸಿ ಹಾಡಿದ್ದು ವಿಶೇಷ. ಈ ಸಂದರ್ಭದಲ್ಲಿ ದೇವಸ್ಥಾನದ ಟ್ರಸ್ಟ್ ವತಿಯಿಂದ ದಾನಮ್ಮ ದೇವಿಯ ತೊಟ್ಟಿಲು ಹಾಗೂ ಬೆಳ್ಳಿಯಲಿಂಗದ ಹರಾಜು ಪ್ರಕ್ರಿಯೆ ಜರುಗಿತು. ಭಕ್ತರಾದ ಮಹೇಶವಾಲಿ ಅವರು ರೂ. 11,011 ಗಳಿಗೆ ಬೆಳ್ಳಿಯ ತೊಟ್ಟಿಲನ್ನು ಪಡೆದುಕೊಂಡರೆ, ಸಂತೋಷ್ ಪಾಟೀಲ್ ಅವರು ರೂ. 5,011 ಗಳಿಗೆ ಬೆಳ್ಳಿಯ ಲಿಂಗವನ್ನು ಭಕ್ತಿಯಿಂದ ಪಡೆದುಕೊಂಡರು. ಸಮಾರಂಭದ ಆಗಮಿಸಿದ್ದ ಎಲ್ಲ ಮಹಿಳೆಯರಿಗೆ ಪೂಜ್ಯರಿಂದ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.ಆರಂಭದಲ್ಲಿ ಸೋಮಶೇಖರ ಎಸ್ ರುಳಿ ಅವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

# ಅ.26 ರಿಂದ ನಿದ್ರಾಹೀನತೆಗೆ ಉಚಿತ ತಪಾಸಣೆ ಶಿಬಿರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ. ಎ. ಡಿ. ಇ. ಸಂಸ್ಥೆಯ ಎ. ವಿ. ಎಸ್. ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದಲ್ಲಿ ಅಕ್ಟೋಬರ್ 26 ಸೋಮವಾರದಿಂದ ಅಕ್ಟೋಬರ್ 31 ಶನಿವಾರದವರೆಗೆ ನಿದ್ರಾಹೀನತೆ ಮತ್ತು ನಿದ್ರೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸೆ ಶಿಬಿರ ಆಯೋಜಿಸಲಾಗಿದೆ. ನಿದ್ರೆಗೆ ಸಂಬಂಧಿಸಿದ ಸಮಸ್ಯೆಗಳಿಂದ ಬಳಲುತ್ತಿರುವ 20 ರಿಂದ 50 ವರ್ಷದೊಳಗಿನವರು ಆರು ದಿನಗಳ ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಬಿ. ಎಲ್. ಡಿ. ಇ ಸಂಸ್ಥೆಯ ಎ. ವಿ. ಎಸ್. ಆಯುರ್ವೇದ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿ ಗಾಗಿ ಮೊ.8073518596 ಮತ್ತು 7030746226 ಗೆ ಸಂಪರ್ಕಿಸಬಹುದಾಗಿದೆ.

# ಕೆಂಭಾವಿ: ಶೇ. 92.79ರಷ್ಟು ಶಾಂತಿಯುತ ಮತದಾನ

■ ಉದಯರಶ್ಮಿ ದಿನಪತ್ರಿಕೆ

ಕೆಂಭಾವಿ: ಈಶಾನ್ಯ ಶಿಕ್ಷಕರ ಮತಕ್ಷೇತ್ರದ ವಿಧಾನಪರಿಷತ್ ಚುನಾವಣೆಯ ಮತದಾನವು ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮತಗಟ್ಟೆ ಸಂಖ್ಯೆ 103ರಲ್ಲಿ ಶುಕ್ರವಾರ ಶಾಂತಿಯುತವಾಗಿ ಜರುಗಿತು.

ಬೆಳಿಗ್ಗೆ 8:00 ಗಂಟೆಗೆ ಆರಂಭಗೊಂಡ ಮತದಾನ ಪ್ರಕ್ರಿಯೆಯು ಸಂಜೆ 4:00 ಗಂಟೆಯವರೆಗೆ ನಡೆಯಿತು. ಕೆಂಭಾವಿ, ನಗನೂರು, ತಿಪ್ಪನಟಗಿ, ಯಾಳಗಿ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳ ಒಟ್ಟು 111 ಶಿಕ್ಷಕ ಮತದಾರರಲ್ಲಿ (95 ಪುರುಷರು, 16 ಮಹಿಳೆಯರು), ಒಟ್ಟು 103 ಮತದಾರರು (90 ಪುರುಷರು, 13 ಮಹಿಳೆಯರು) ತಮ್ಮ ಹಕ್ಕು ಚಲಾಯಿಸಿದ್ದಾರೆ. ಇದರಿಂದಾಗಿ ಮತಗಟ್ಟೆಯಲ್ಲಿ ಶೇಕಡಾ 92.79% ಮತದಾನ ದಾಖಲಾಗಿದೆ ಎಂದು ಮತಗಟ್ಟೆ ಅಧಿಕಾರಿ ಸುಗಪ್ಪ ಮಾಹಿತಿ ನೀಡಿದ್ದಾರೆ.

ಚುನಾವಣಾ ಕಣದಲ್ಲಿ ಬಿಜೆಪಿ ಹಾಗೂ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಶಶೀಲ್ ಜಿ. ನಮೋಶಿ, ಕಾಂಗ್ರೆಸ್ ಪಕ್ಷದಿಂದ ಶರಣಪ್ಪ ಮಟ್ಟೂರು, ಜನತಾ ದಳ (ಯು)ನಿಂದ ಎಸ್. ಎಲ್. ಪಾಟೀಲ ಹಾಗೂ ಆಮ್ ಆದ್ಮಿ ಪಕ್ಷದಿಂದ ಸಾಯಬಣ್ಣ ಸ್ಪರ್ಧಿಸಿದ್ದಾರೆ. ಇವರೊಂದಿಗೆ ಕವಿರಾಜ, ತುಳಸಪ್ಪ ದಾಸರ, ಮಹಬೂಬ್ ವಂಟೇಲ್, ರಾಜಕುಮಾರ, ರಾಜು, ಶರಣಬಸಪ್ಪ, ಶಶಿಧರ, ಶಿವಶಂಕರ ಹಾಗೂ ಸುರೇಶ ಸೇರಿದಂತೆ ಒಟ್ಟು 13 ಅಭ್ಯರ್ಥಿಗಳು ತಮ್ಮ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಪಿಎಸ್‌ಐ ಸುವರ್ಣ ವಿ. ಮಲ್ಲಶೆಟ್ಟಿ ಅವರ ನೇತೃತ್ವದಲ್ಲಿ ಮತಗಟ್ಟೆ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.



# ಮೊದಲ ಸ್ವಾತಂತ್ರ ಕಹಳೆ ಮೊಳಗಿಸಿದ ವೀರವನಿತೆ ಚೆನ್ನಮ್ಮ

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ಅಪ್ರತಿಮ ದಿಟ್ಟತನದ ದೀಪ್ತಿ, ಹೆಮ್ಮೆಯ ಛಲಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮಳ ಯಶೋಗಾಥೆ ವೀರೋಚಿತವಾಗಿದೆ. ಮಹಾನ್ ವೀರವನಿತೆಯ ಶೌರ್ಯ, ತ್ಯಾಗ ಹಾಗೂ ಕೆಚ್ಚೆದೆಯ ಹೋರಾಟ ಅವಿಸ್ಮರಣೀಯವಾಗಿದ್ದು, ಭಾರತಾಂಬೆಯ ಜನತೆ ಎಂದಿಗೂ ಮರೆಯಲಾರರು ಎಂದು ಮುಖ್ಯೋಪಾಧ್ಯಾಯ ಜಿ.ಎಂ.ಕೋಟ್ಯಾಳ ನುಡಿದರು.ಇಲ್ಲಿನ ಆರ್.ಬಿ.ಪಿ.ಜಿ. ಹಳಕಟ್ಟಿ ಪ್ರೌಢಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಿತ್ತೂರು ರಾಣಿ ಚೆನ್ನಮ್ಮ ಅವರ 248ನೇ ಜಯಂತಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸ್ವಾತಂತ್ರ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ಧ್ವನಿ ಎತ್ತಿ ಕಹಳೆ ಮೊಳಗಿಸಿದ ಮೊದಲ ವೀರ ಮಹಿಳೆ ಚೆನ್ನಮ್ಮ. ಈ ನೆಲದ ಮಹಾತಾಯಿಯ ಸಾಧನೆ ಚಿನ್ನದಂಥದ್ದು, ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೆ ಉಳಿದಿದೆ ಎಂದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಬಿ.ಬಿ.ಕುಂದರಗಿ, ಟಿ.ಬಿ.ಮೇಟಿ, ವಿಶಾಲ ರಾಠೋಡ ಹಾಗೂ ಶಿಕ್ಷಕರಾದ ಎನ್.ಎಸ್.ಬಿರಾದಾರ, ಆರ್.ಎಂ.ರಾಠೋಡ ಸೇರಿದಂತೆ ಇತರರು ಇದ್ದರು.



# ಸ್ವಾತಂತ್ರ್ಯಕ್ಕೆ ಹೋರಾಡಿದ ಕಿತ್ತೂರು ಚೆನ್ನಮ್ಮ :ಕುದರಿ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮೊದಲ ಮಹಿಳಾ ಹೋರಾಟಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮ ಎಂದು ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿ.ಕೆ. ಕುದರಿ ಹೇಳಿದರು.

ಪಟ್ಟಣದ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ಶುಕ್ರವಾರ ಜರುಗಿದ ರಾಣಿ ಚನ್ನಮ್ಮಳ 248 ನೇ ಜಯಂತ್ಯುತ್ಸವದಲ್ಲಿ ಪಾಲ್ಗೊಂಡು ನಂತರ ತಹಶೀಲ್ದಾರ ಕಾರ್ಯಾಲಯದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇಂದು ಎಲ್ಲ ಸ್ವಾತಂತ್ರ್ಯ ಹೋರಾಟಗಾರರು, ಶರಣರು, ಮಹಾತ್ಮರ ಜಯಂತಿಗಳಂದು ಎಲ್ಲರೂ ಭಾಗವಹಿಸಿ ಅವರ ಸಾಧನೆಗಳನ್ನು ಅರಿಯಬೇಕಾಗಿದೆ ಎಂದರು. ತಾಲ್ಲೂಕು ಆಡಳಿತದಿಂದ ತಹಶೀಲ್ದಾರ ಕಾರ್ಯಾಲಯದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಶಿಕ್ಷಕ ಪ್ರಲ್ಹಾದ ಕುಲಕರ್ಣಿ, ಕ.ರ.ವೇ ಜಿಲ್ಲಾಧ್ಯಕ್ಷ ಶ್ರೀಶೈಲ ಮುಳಜಿ ಮಾತನಾಡಿದರು. ಆರಂಭದಲ್ಲಿ ಚನ್ನಮ್ಮಳ ವೃತ್ತನ್ನು ಸಿಂಗರಿಸಿ ಧ್ವಜಾರೋಹಣ ನೆರವೇರಿಸಲಾಯಿತು. ನಂತರ ಭಾವಚಿತ್ರಕ್ಕೆ ವಿದ್ಯುಕ್ತವಾಗಿ ಪೂಜೆ ಸಲ್ಲಿಸಲಾಯಿತು.

ತಹಶೀಲ್ದಾರ ನಿಂಗಣ್ಣ ಬಿರಾದಾರ, ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ರಿಯಾಜ್ ಯಲಗಾರ, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ರಮೇಶ ಮಸಬಿನಾಳ, ಸದಸ್ಯರಾದ ಕಾಸುಗೌಡ ಬಿರಾದಾರ(ಜಲಕತ್ತಿ), ಶಿರಸ್ತೇದಾರ ಸುರೇಶ ಮ್ಯಾಗೇರಿ, ತಾಲ್ಲೂಕು ಜಂಗಮಾಭಿವೃದ್ಧಿ ಸಂಘದ ಅಧ್ಯಕ್ಷ ಸೋಮಶೇಖರ ಹಿರೇಮಠ, ತಾಲ್ಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಗುರುರಾಜ್ ಆಕಳವಾಡಿ. ಪಂಚಾಕ್ಷರಿ ಮಿಂಚನಾಳ, ಸೋಮು ದೇವೂರ, ಕಾಸು ವಡ್ಡೋಡಗಿ. ಜಿ.ಪಿ.ಬಿರಾದಾರ, ಮಡುಗೌಡ ಬಿರಾದಾರ ಹಾಗೂ ಸಮುದಾಯದ ಪ್ರಮುಖರು ಇದ್ದರು.

# ಮಾನಸಿಕ ಆರೋಗ್ಯ ಸಂಪನ್ಮೂಲ ವ್ಯಕ್ತಿಗಳ ಹುದ್ದೆಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026–27ನೇ ಸಾಲಿನ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಮಾನಸಿಕ ಆರೋಗ್ಯ ಸಂಬಂಧಿತ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಉದ್ದೇಶದಿಂದ, ಜಿಲ್ಲೆಯಲ್ಲಿ ಖಾಲಿ ಇರುವ ಮೂರು ಬ್ಲಾಕ್‌ಗಳ ಸಂಪನ್ಮೂಲ ಕೇಂದ್ರಗಳಿಗೆ ತಲಾ ಒಬ್ಬರಂತೆ ಮಾನಸಿಕ ಆರೋಗ್ಯ ಸಂಪನ್ಮೂಲ ವ್ಯಕ್ತಿಗಳನ್ನು (Academic Resource Person for Mental Health) ನೇಮಕ ಮಾಡಿಕೊಳ್ಳಲು ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಮನೋವಿಜ್ಞಾನ, ಕ್ಲಿನಿಕಲ್ ಮನೋವಿಜ್ಞಾನ, ಕೌನ್ಸೆಲಿಂಗ್ ಮನೋವಿಜ್ಞಾನ ಅಥವಾ ಸಂಬಂಧಿತ ವಿಷಯಗಳಲ್ಲಿ ಎಂ.ಎ./ಎಂ.ಎಸ್ಸಿ. ಪದವಿ ಹೊಂದಿರಬೇಕು. ಶಾಲಾ ಅಥವಾ ಸಮುದಾಯ ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಕನಿಷ್ಠ ಒಂದು ವರ್ಷದ ಅನುಭವ ಹೊಂದಿರಬೇಕು. ಕನ್ನಡ ಮತ್ತು ಇಂಗ್ಲಿಷ್ ಭಾಷಾ ಜ್ಞಾನದ ಜೊತೆಗೆ ಮೂಲಭೂತ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಆಯ್ಕೆಯಾದ ಪ್ರತಿ ಅಭ್ಯರ್ಥಿಗೆ ಮಾಸಿಕ ರೂ.40,000 ಗೌರವಧನ ಹಾಗೂ ರೂ.10,000 ಪ್ರಯಾಣ ಭತ್ಯೆ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅಗತ್ಯ ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ, ಎರಡು ಪ್ರತಿಗಳಲ್ಲಿ ಸಿದ್ಧಪಡಿಸಿ, ನವೆಂಬರ್.7ರ ಸಂಜೆ 4.30 ಗಂಟೆಯೊಳಗಾಗಿ ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ, ವಿಜಯಪುರ ಜಿಲ್ಲಾ ಕಚೇರಿಗೆ ಸಲ್ಲಿಸಬೇಕು. ಈ ನೇಮಕಾತಿಗೆ ಸಂಬಂಧಿಸಿದ ಅಧಿಸೂಚನೆಯನ್ನು ವಿಜಯಪುರ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಮತ್ತು ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಸೂಚನೆಯಂತೆ ಜಿಲ್ಲಾ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

# ರಾಣಿ ಚೆನ್ನಮ್ಮ ಹೋರಾಟ, ತತ್ವಾದರ್ಶ ಅನುಕರಣೀಯ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಭಾರತದ ಮೊದಲ ಮಹಿಳಾ ಸ್ವಾತಂತ್ರ ಹೋರಾಟಗಾರ್ತಿ, ಕಿತ್ತೂರ ರಾಣಿ ಚನ್ನಮ್ಮಾ ರಿಗೆ ಆದ್ಯಾತ್ಮದ ಜೊತೆಗೆ ಸಾಮಾಜ್ಯ ಸ್ಥಾಪಿಸುವುದು ಹೇಗೆ ಎನ್ನುವುದು ರಕ್ತಗತವಾಗಿ ಬಂದಿರುವಂತದ್ದು. ಇಂತಹ ಮಹಾನ್ ತಾಯಿ ತ್ಯಾಗ, ಹೋರಾಟ, ತತ್ವಾದರ್ಶ, ಜೀವನ ಚರಿತ್ರೆ ಇಂದಿನ ಯುವಕರಿಗೆ ತಿಳಿಸುವುದು ಕಾರ್ಯ ಮಹತ್ವದಾಗಿದೆ ಎಂದು ದಾರವಾಡ ಕೆರಿಯರ ಅಕಾಡೆಮಿ ಉಪನ್ಯಾಸಕ ರಂಘನಾಥ ತೋರ್ಫೆ ಹೇಳಿದರು.

ಪಟ್ಟಣದ ತಹಶೀಲ್ದಾರ ಕಾರ್ಯಾಲಯದ ಆವರಣದಲ್ಲಿ ತಾಲೂಕು ಆಡಳಿತ ಹಮ್ಮಿಕೊಂಡ ವೀರ ವನಿತೆ ಕಿತ್ತೂರು ರಾಣಿ ಚನ್ನಮ್ಮಳ 248ನೇ ಜಯಂತ್ಯೋತ್ಸವ ಹಾಗೂ 202ನೇ ವಿಜಯೋತ್ಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ಶಾಂತವೀರ ಮನಗೂಳಿ, ಪಂಚಮಸಾಲಿ ಸಮಾಜದ ತಾಲೂಕಾಧ್ಯಕ್ಷ ಎಂ.ಎಂ.ಹಂಗರಗಿ, ಲಿಂಬೆ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಅಶೋಕ ಅಲ್ಲಾಪುರ, ನೌಕರರ ಸಂಘದ ಅಧ್ಯಕ್ಷ ಅಶೋಕ ತೆಲ್ಲೂರ, ವಕೀಲರ ಸಂಘದ ಅಧ್ಯಕ್ಷ ಎಸ್.ಬಿ.ಪಾಟೀಲ ಗುಂದಗಿ, ಗ್ರೇಡ್ 2 ತಹಶೀಲ್ದಾರ ಇಂದಿರಾಬಾಯಿ ಬಳಗಾನೂರ ವೇದಿಕೆ ಮೇಲಿದ್ದರು.

ಅಧ್ಯಕ್ಷತೆ ವಹಿಸಿದ ತಹಶೀಲ್ದಾರ ಕರೆಪ್ಪ ಬೆಳ್ಳಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಬಸವರಾಜ ಸೊಂಪೂರ ನಿರೂಪಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಚೆನ್ನಮ್ಮಾಜಿ ವೃತ್ತದಲ್ಲಿ ಶಾಸಕ ಅಶೋಕ ಮನಗೂಳಿ ಅವರು ಚೆನ್ನಮ್ಮಾಜಿ ಬಾವಚಿತ್ರಕ್ಕೆ ಪೂಜೆ ಸಲ್ಲಿಸಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಸಾನಿಧ್ಯ ಆಸಂಗಿಹಾಳ ಆರೋಢಮಠದ ಶಂಕ್ರಾನಂದ ಮಹಾಸ್ವಾಮಿಗಳು, ಬಿಇಓ ಟಿ.ಎಸ್. ಆಲಗೂರ, ನಗರಸಭೆ ಪೌರಾಯುಕ್ತ ರವಿ ಶಿರಗುಪ್ಪಿ, ಸೋಮನಗೌಡ ಬಿರಾದಾರ, ವ್ಹಿ.ಬಿ.ಕುರಡಿ, ನೂರಹ್ಮದ ಅತ್ತಾರ, ರವಿ ಬಿರಾದಾರ, ನಿಂಗನಗೌಡ ಪಾಟೀಲ, ಕಾಳಣ್ಣ ಬಗಲಿ, ಅಂಬರೀಶ ಚೌಗಲೆ, ಪ್ರತಿಬಾ ಚಳ್ಳಗಿ, ಬಸವರಾಜ ಐರೋಡಗಿ ಮಲ್ಲು ಅಲ್ಲಾಪುರ ಸೇರಿದಂತೆ ಅನೇಕರಿದ್ದರು.

### ಕೊಲ್ಹಾರ ತಾಲೂಕಿನಲ್ಲಿ ಕಿತ್ತೂರು ಚೆನ್ನಮ್ಮ ಜಯಂತಿ ಸಂಭ್ರಮದಲ್ಲಿ ತಹಶೀಲ್ದಾರ್ ಸಂತೋಷ ಮ್ಯಾಗೇರಿ ಅಭಿಮತ

# ಚೆನ್ನಮ್ಮನವರ ಶೌರ್ಯ, ಸ್ವಾಭಿಮಾನ ಯುವಪೀಳಿಗೆಗೆ ಮಾದರಿ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ಬ್ರಿಟಿಷರ ಸಾಮ್ರಾಜ್ಯಶಾಹಿ ಆಡಳಿತದ ವಿರುದ್ಧ ಸಿಡಿದೆದ್ದು, ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೊತ್ತಿಸಿದ ವೀರರಾಣಿ ಕಿತ್ತೂರು ಚೆನ್ನಮ್ಮನವರ ಧೈರ್ಯ, ಸಾಹಸ, ಸ್ವಾಭಿಮಾನ ಹಾಗೂ ದೇಶಭಕ್ತಿ ಇಂದಿನ ಯುವಪೀಳಿಗೆಗೆ ಸ್ಫೂರ್ತಿದಾಯಕವಾಗಿವೆ ಎಂದು ತಹಶೀಲ್ದಾರ್ ಸಂತೋಷ ಮ್ಯಾಗೇರಿ ಹೇಳಿದರು.

### ರೋಣಿಹಾಳದಲ್ಲೂ ಚೆನ್ನಮ್ಮ ಜಯಂತಿ ಸಂಭ್ರಮ

**ಕೊಲ್ಹಾರ: ತಾಲೂಕಿನ ರೋಣಿಹಾಳ ಗ್ರಾಮದ ನವನಗರದಲ್ಲಿಯೂ ವೀರರಾಣಿ ಕಿತ್ತೂರು ಚೆನ್ನಮ್ಮನವರ ಜಯಂತಿಯನ್ನು ಶ್ರದ್ಧಾಭಕ್ತಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.**

**ಶ್ರೀ ವೀರರಾಣಿ ಕಿತ್ತೂರು ಚೆನ್ನಮ್ಮ ತರುಣ ಮಂಡಳಿ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಚೆನ್ನಮ್ಮನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಅರ್ಪಿಸಲಾಯಿತು.**

**ಕಾರ್ಯಕ್ರಮದಲ್ಲಿ ಶ್ರೀ ವೀರರಾಣಿ ಕಿತ್ತೂರು ಚೆನ್ನಮ್ಮ ತರುಣ ಮಂಡಳಿಯ ಪದಾಧಿಕಾರಿಗಳು, ಸದಸ್ಯರು, ಸಮಾಜದ ಹಿರಿಯರು ಹಾಗೂ ಯುವಕರು ಪಾಲ್ಗೊಂಡಿದ್ದರು. ತಾಲೂಕಿನ ವಿವಿಧೆಡೆ ನಡೆದ ಜಯಂತ್ಯುತ್ಸವಗಳಲ್ಲಿ ವೀರರಾಣಿಯ ಶೌರ್ಯ, ಸ್ವಾಭಿಮಾನ ಹಾಗೂ ದೇಶಭಕ್ತಿಯನ್ನು ಸ್ಮರಿಸುವ ಮೂಲಕ ಗೌರವ ಸಲ್ಲಿಸಲಾಯಿತು.**




### ಚೆನ್ನಮ್ಮ ವೃತ್ತದಲ್ಲಿ ಪುಷ್ಪನಮನ

**ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ರಾಣಿ ಚೆನ್ನಮ್ಮ ವೃತ್ತದಲ್ಲಿ ಚೆನ್ನಮ್ಮನವರ ಭಾವಚಿತ್ರಕ್ಕೆ ತಹಶೀಲ್ದಾರ್ ಸಂತೋಷ ಮ್ಯಾಗೇರಿ ಪೂಜೆ ಸಲ್ಲಿಸಿ ಪುಷ್ಪಾರ್ಚನೆಗೈದರು.**

ಪಟ್ಟಣದಲ್ಲಿ ಶುಕ್ರವಾರ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಚೆನ್ನಮ್ಮನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ರಾಣಿ ಚೆನ್ನಮ್ಮ ಅವರ ಸ್ವಾಭಿಮಾನ ಮತ್ತು ಹೋರಾಟದ ಕೆಚ್ಚೆದೆ ಭಾರತೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೇರಣೆಯಾಯಿತು ಎಂದು ಬಣ್ಣಿಸಿದರು.

ಲಿಂಗಾಯತ ಪಂಚಮಸಾಲಿ ಸಮಾಜದ ಮುಖಂಡ ಮಲ್ಲು ದೇಸಾಯಿ ಬೀಳಗಿ ಮಾತನಾಡಿ, ವೀರರಾಣಿ ಕಿತ್ತೂರು ಚೆನ್ನಮ್ಮನವರು ಯಾವುದೇ ಒಂದು ಜಾತಿ, ಸಮುದಾಯ ಅಥವಾ ಪ್ರದೇಶಕ್ಕೆ ಸೀಮಿತರಾದವರಲ್ಲ. ಅವರು ಇಡೀ ದೇಶದ ಹೆಮ್ಮೆಯ ವೀರಮಹಿಳೆ. ನಾಡಿನ ಸ್ವಾಭಿಮಾನಕ್ಕಾಗಿ ಅವರು ನಡೆಸಿದ ಹೋರಾಟ, ತ್ಯಾಗ ಹಾಗೂ ಬಲಿದಾನವನ್ನು ಪ್ರತಿಯೊಬ್ಬರೂ ಸ್ಮರಿಸಬೇಕು ಎಂದರು.

ಮುಖಂಡ ಶ್ರೀಶೈಲ ಪಾರಗೊಂಡ, ದೈಹಿಕ ಶಿಕ್ಷಣ ಶಿಕ್ಷಕ ಮಲ್ಲಿಕಾರ್ಜುನ ಕುಬಕಡ್ಡಿ ಮಾತನಾಡಿದರು.

ಉಪತಹಶೀಲ್ದಾರ್ ಎನ್.ಕೆ. ನದಾಫ್, ಶಿರಸ್ತೇದಾರ ಕೃಷ್ಣಾ ಗೂಡೂರ, ಸಮಾಜದ ಮುಖಂಡರಾದ ಮಲ್ಲು ದೇಸಾಯಿ, ಕಲ್ಲು ಬಾಲಗೊಂಡ, ಬಸವರಾಜ ಬೀಳಗಿ, ವಿನೋದ ಎಂ. ಬೀಳಗಿ, ಸಂತೋಷ ರೂಡಗಿ, ಬಸವರಾಜ ರೂಡಗಿ, ಮಲ್ಲು ಬೀಳಗಿ, ನಿಂಗಪ್ಪ ರೂಢಗಿ, ಬಸವರಾಜ ಎಸ್. ಬೀಳಗಿ, ಪ್ರಜ್ವಲ ಬೆಳ್ಳುಬ್ಬಿ, ಮಳಿಯಪ್ಪ ಪತಂಗಿ, ಯಮನೂರಿ ಹೆರಕಲ್, ಭೀಮು ಹೆರಕಲ್, ಮುಖಂಡ ಯಮನೂರಿ ಮಾಕಾಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಚಿಣ್ಣರ ಕಲಾಶ್ರೀ ಶಿಬಿರದಲ್ಲಿ ಭಾಗವಹಿಸಲು ಅವಕಾಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ರಾಜ್ಯಮಟ್ಟದ ಚಿಣ್ಣರ ಕಲಾಶ್ರೀ ಶಿಬಿರಕ್ಕೆ 9ರಿಂದ 16 ವರ್ಷದೊಳಗಿನ ಪ್ರತಿಭಾವಂತ ಮಕ್ಕಳನ್ನು ಆಯ್ಕೆ ಮಾಡಲು ಅಕ್ಟೋಬರ್ 29ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾ ಬಾಲಭವನದಲ್ಲಿ ಜಿಲ್ಲಾ ಮಟ್ಟದ ಸ್ಪರ್ಧೆ ಆಯೋಜಿಸಲಾಗಿದೆ.

ಸೃಜನಾತ್ಮಕ ಕಲೆ: ಚಿತ್ರಕಲೆ, ಕರಕುಶಲ ಕಲೆ ಹಾಗೂ ಜೇಡಿಮಣ್ಣಿನ ಕಲೆ ವಿಭಾಗಗಳಲ್ಲಿ ಮಕ್ಕಳು ಕಡ್ಡಾಯವಾಗಿ ಭಾಗವಹಿಸಬೇಕು.

ಸೃಜನಾತ್ಮಕ ಬರವಣಿಗೆ: ಕಥೆ, ಕವನ ಹಾಗೂ ಪ್ರಬಂಧ ಬರವಣಿಗೆ ವಿಭಾಗಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ಸೃಜನಾತ್ಮಕ ಪ್ರದರ್ಶನ ಕಲೆ: ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಕರ್ನಾಟಕ ಹಾಗೂ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ವಾದ್ಯ ಸಂಗೀತ, ಸುಗಮ ಸಂಗೀತ, ಏಕಪಾತ್ರಾಭಿನಯ ಮತ್ತು ಯೋಗನೃತ್ಯ ಇವುಗಳಲ್ಲಿ ಯಾವುದಾದರೂ ಒಂದು ಕಲೆಯನ್ನು ಪ್ರದರ್ಶಿಸಲು ಅವಕಾಶವಿದೆ. ಗುಂಪು ಪ್ರದರ್ಶನಕ್ಕೆ ಅವಕಾಶವಿರುವುದಿಲ್ಲ.

ವಿಜ್ಞಾನದಲ್ಲಿ ನೂತನ ಆವಿಷ್ಕಾರ: ವಿಜ್ಞಾನಕ್ಕೆ ಸಂಬಂಧಿಸಿದ ವಿಷಯದ ಕುರಿತು ಮಾದರಿ ಸಿದ್ಧಪಡಿಸಿ, ಅದರ ಕಾರ್ಯವೈಖರಿ ಹಾಗೂ ಮಹತ್ವವನ್ನು ವಿವರಿಸಬೇಕು. ಅಲ್ಲದೆ, ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತೀರ್ಪುಗಾರರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಬೇಕು. ಪ್ರತಿಯೊಬ್ಬ ಸ್ಪರ್ಧಿಯೂ ಪ್ರತ್ಯೇಕ ಮಾದರಿಯನ್ನು ಪ್ರದರ್ಶಿಸುವುದು ಕಡ್ಡಾಯವಾಗಿದೆ.

ವಿಶೇಷಚೇತನ ಹಾಗೂ ಬುಡಕಟ್ಟು ಪ್ರದೇಶದ ಮಕ್ಕಳಿಗೂ ಮೇಲಿನ ಯಾವುದೇ ಸ್ಪರ್ಧಾ ವಿಭಾಗದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಸ್ಥಳೀಯ ಮಟ್ಟದಲ್ಲಿ ಆಯ್ಕೆಯಾದ 9ರಿಂದ 16 ವರ್ಷದೊಳಗಿನ ಪ್ರತಿಭಾವಂತ ಮಕ್ಕಳನ್ನು ರಾಜ್ಯಮಟ್ಟದ 'ಚಿಣ್ಣರ ಕಲಾಶ್ರೀ' ಶಿಬಿರಕ್ಕೆ ನಿಯೋಜಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 7760402239 ಸಂಪರ್ಕಿಸಬಹುದು. ಈ ಕುರಿತು ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ ಮಾಹಿತಿ ತಲುಪಿಸುವ ಉದ್ದೇಶದಿಂದ ಸಾರ್ವಜನಿಕರು ಹಾಗೂ ಪೋಷಕರು ಸ್ಪರ್ಧೆಯಲ್ಲಿ ಭಾಗವಹಿಸಲು ಮಕ್ಕಳನ್ನು ಪ್ರೋತ್ಸಾಹಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಪ್ರಕಟಣೆ ತಿಳಿಸಿದೆ.

### ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಆನಂದ ಕೆ. ಆಶಯ

# ಕಿತ್ತೂರು ಚೆನ್ನಮ್ಮಳ ಶೌರ್ಯ ಮಹಿಳೆಯರಿಗೆ ಸ್ಫೂರ್ತಿಯಾಗಲಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಧೈರ್ಯ, ಶೌರ್ಯ, ದೇಶಪ್ರೇಮ ಹಾಗೂ ಆಡಳಿತ ವೈಖರಿಯನ್ನು ಇಂದಿನ ಮಹಿಳೆಯರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಹೇಳಿದರು.

ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅಂತ ವೀರರಾಣಿ ಕಿತ್ತೂರು ಚೆನ್ನಮ್ಮ ಅವರ ಜೀವನ ಸಾಧನೆಗಳು ಹಾಗೂ ಹೋರಾಟದ ಬದುಕನ್ನುಯುವ ಪೀಳಿಗೆಅರಿತುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಕಿತ್ತೂರು ರಾಣಿ ಚೆನ್ನಮ್ಮ ಅವರು ತಮ್ಮ ನಾಡಿನ ನೆಲ–ಜಲ ಹಾಗೂ ಸ್ವಾಭಿಮಾನಕ್ಕಾಗಿ ದಿಟ್ಟತನದಿಂದ ಹೋರಾಡಿದ ವೀರ ಮಹಿಳೆ. ಅಂದಿನ ಕಾಲದಲ್ಲಿಯೇ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ತಮ್ಮ ನಾಯಕತ್ವದ ಗುಣವನ್ನು ಮೆರೆದಿದ್ದರು. ಅವರ ಧೈರ್ಯ, ಶೌರ್ಯ, ದೇಶಪ್ರೇಮ ಹಾಗೂ ಆಡಳಿತದ ಕೌಶಲ್ಯಗಳು ಇಂದಿನ ಮಹಿಳೆಯರಿಗೆ ಸ್ಫೂರ್ತಿಯಾಗಿವೆ. ಅವರ ಜೀವನಾದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ದೇಶಪ್ರೇಮ ಮತ್ತು ಸ್ವಾಭಿಮಾನದ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕು ಎಂದು ಹೇಳಿದರು.

### ರಾಣಿ ಚೆನ್ನಮ್ಮ ಭಾವಚಿತ್ರದ ಮೆರವಣಿಗೆ

**ಕಾರ್ಯಕ್ರಮಕ್ಕೂ ಮುನ್ನ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದ ಆವರಣದಿಂದ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆಯು ನಗರದ ಪ್ರಮುಖ ವೃತ್ತಗಳ ಮೂಲಕ ಸಾಗಿ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ ತಲುಪಿತು.**



ಮಹಾನಗರ ಪಾಲಿಕೆಯ ಮೇಯರ್ ಮಡಿವಾಳಪ್ಪ ಕರಡಿ ಅವರು ಕಾರ್ಯಕ್ರಮ ಉದ್ಘಾಟಿಸಿದರು.

ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ ಹಾಗೂ ಸಮಾಜದ ಮುಖಂಡ ಬಿ.ಎಂ. ಪಾಟೀಲ ಅವರು ಮಾತನಾಡಿದರು.

ಶರಣಗೌಡ ಪಾಟೀಲ ಅವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಸದಸ್ಯೆ ಶ್ರೀಮತಿ ಭಾರತಿ ಕಣಮುಚನಾಳ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೊಳಿ, ಪಾಲಿಕೆಯ ಉಪ ಆಯುಕ್ತ ಮಹಾವೀರ ಬೋರಣ್ಣನವರ, ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿ ಸಿ.ಬಿ. ಕುಂಬಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ್ ಭೋವಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ, ಆಯುಷ್ ಅಧಿಕಾರಿ ಡಾ. ವಿದ್ಯಾವತಿ ಅಥಣಿ, ಗಿರೀಶ ಕುಲಕರ್ಣಿ, ವಿ.ಸಿ. ನಾಗಠಾಣ, ಬಿ.ಎಂ. ಬಿರಾದಾರ ಹಾಗೂ ದಾನೇಶ ಅವಟಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಮತ್ತು ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR